ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 26 RNI Number : KNKAN/25/A2770 30-01-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :26 ರಾಯಚೂರು 30-01-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ಡಿಕೆಶಿ ಸಿಎಂ ಸ್ಥಾನಕ್ಕೆ ಹೋಗಲು ಭಗವಂತ ಅವಕಾಶ ಮಾಡಿಕೊಡಬಾರದು;ಜನಾರ್ದನ ರೆಡ್ಡಿ

ಬೆಂಗಳೂರು,ಜ.29-

ಬಳ್ಳಾರಿ ಪ್ರಕರಣದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ನಡೆದುಕೊಂಡ ರೀತಿ ನೋಡಿದರೆ, ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಹೋಗಲು ಭಗವಂತ ಅವರಿಗೆ ಅವಕಾಶ ಮಾಡಿ ಕೊಡಬಾರದು. ಮುಖ್ಯಮಂತ್ರಿಯಾಗಿ ನೀವೇ (ಸಿದ್ದರಾಮಯ್ಯ) ಎರಡೂವರೆ ವರ್ಷ ಮುಂದುವರಿಯಬೇಕು ಎಂದು ಶಾಸಕ ಜನಾರ್ದನ ರೆಡ್ಡಿ ಆಶಿಸಿದರು.

ವಿಧಾನಸಭಾ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ವೇಳೆ ಬಳ್ಳಾರಿ ಗಲಾಟೆ ಪ್ರಕರಣ ವಿಷಯ ಪ್ರಸ್ತಾಪಿಸಿದ ಜನಾರ್ದನ ರೆಡ್ಡಿ, 'ಬಳ್ಳಾರಿ ಪ್ರಕರಣದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ನಡೆದುಕೊಂಡ ರೀತಿ ನೋಡಿದರೆ, ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಹೋಗಲು ಭಗವಂತ ಅವರಿಗೆ ಅವಕಾಶ ಮಾಡಿ ಕೊಡಬಾರದು. ಮುಖ್ಯಮಂತ್ರಿಯಾಗಿ ನೀವೇ ಎರಡೂವರೆ ವರ್ಷ ಮುಂದುವರಿಯಬೇಕು. ರಾಜ್ಯದ ಕಾನೂನನ್ನು ನೀವು ಕಾಪಾಡಿ. ವಿಶೇಷವಾಗಿ ಬಳ್ಳಾರಿಯಲ್ಲಿ ನಡೆಯುತ್ತಿರುವ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕಲು ಒಳ್ಳೆಯ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಿ' ಎಂದು ಸಿಎಂ ಸಿದ್ದರಾಮಯ್ಯರಿಗೆ ಮನವಿ ಮಾಡಿದರು.

'ಬಳ್ಳಾರಿಯಲ್ಲಿ ಅಂದು ಎಲ್ಲರೂ ಮದ್ಯ ಕುಡಿದು ಬಂದಿದ್ದರು. ನೆರೆದಿದ್ದ ಜನ ಕಲ್ಲು ಹೊಡೆದರೆ. ಅಂಗರಕ್ಷಕರು ಗುಂಡು ಹಾರಿಸಿದರು. ಅದೆಲ್ಲವೂ



ನಮ್ಮ ಮನೆಗೆ ಬಂದು ಹೊಡೆದಿದೆ. ಈ ಘಟನೆ ಸಂಬಂಧ ಫಾರೆನ್ಸಿಕ್ ಲ್ಯಾಬ್‌ನವರು ಬಂದು ಸಾಕ್ಷ್ಯ ತೆಗೆದುಕೊಂಡು ಹೋಗಿದ್ದಾರೆ. ಬಳಿಕ ನಮ್ಮ ಮನೆಗೆ ಮತ್ತು ಬಂದರು. ಜನಾರ್ದನ ರೆಡ್ಡಿ ಅವರೇ ನೀವು ಹೆದರಬೇಡಿ ಅಂದರು. ಅವರಿಗೆ ಈಗಾಗಲೇ ವರದಿ ಬಂದಿರಬಹುದು. ಎಸ್‌ಪಿ ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ನಮ್ಮ ಮನೆ ಮೇಲೆ ಕಲ್ಲು ತೂರುತ್ತಿದ್ದರು. ಈ ವೇಳೆ ಪೊಲೀಸರು ಲಾಟಿ ಚಾರ್ಜ್ ಮಾಡುತ್ತಿದ್ದರು. ಈ ವೇಳೆ ವಾಪಸ್ ಓಡುವಾಗ ಗನ್ ಪಾಯಿಂಟ್‌ಗೆ ಸಿಕ್ಕಿ ಕಾರ್ಯಕರ್ತ ಡೆತ್ ಆಗಿದ್ದಾನೆ' ಎಂದು ವಿವರಿಸಿದರು.

'ಎಂಎಲ್‌ಎ ಅಲ್ಲೇ ಇದ್ದ, ನನ್ನ ಮನೆ ಮುಂದೆಯೇ ಕಾರ್ಯಕರ್ತ ಅಸು ನೀಗಿದ್ದ. ಕಾರ್ಯಕರ್ತನ ಸಾವಿಗೆ ನಾವು ಕಾರಣ ಅಂತ ಮನೆ ಮುಂದೆ ಪ್ರತಿಭಟನೆ ಮಾಡಿದರು. ಜನಾರ್ದನ ರೆಡ್ಡಿ ಮನೆ ಮೇಲೆ ಸಾವಿರಾರು ಜನ ದಾಳಿ ಮಾಡಿದ್ದಾರೆ ಅಂತ ಎಸ್ಪಿ ಸುಮೋಟೋ ಕೇಸ್ ದಾಖಲಿಸಿಕೊಂಡಿದ್ದಾರೆ. ಸಿಎಂ ಸೂಚನೆ ಮೇರೆಗೆ ಪೊಲೀಸರು ಕರ್ತವ್ಯ ಮಾಡಿದ್ದಾರೆ. ಆದರೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಐ ಸ್ಟಾಂಡ್ ವಿತ್ ಅವರ್ ಎಂಎಲ್‌ಎ ಅಂತ ಹೇಳಿದ್ದಾರೆ. ಅವರು ಅವರ ಎಂಎಲ್‌ಎ ಅವರ ಪರವಾಗಿ ನಿಲ್ಲಲಿ. ಆದರೆ ಎಂಥವರ ಪರ ನಿಲ್ಲಬೇಕು.?. ನಾನೂ ಬಳ್ಳಾರಿಯಲ್ಲಿ ರಾಜಕಾರಣ ಮಾಡಿದ್ದೇನೆ. ಆದರೆ ನಿಮ್ಮ ಹುದ್ದೆಗೆ ನೀವು ಗೌರವ ಕೊಟ್ಟಿಲ್ಲ' ಎಂದು ದೂರಿದರು.

'ನೀವು ಆ ಕುರ್ಚಿಯಲ್ಲಿ ಕೂರಲು ಯೋಗ್ಯರೋ, ಇಲ್ಲವೋ ಗೊತ್ತಿಲ್ಲ. ಅದನ್ನು ನಿಮ್ಮ ಪಕ್ಷವೇ ತೀರ್ಮಾನ ಮಾಡಲಿ. ಇಷ್ಟೆಲ್ಲಾ ಘಟನೆ ನಡೆದರೂ ಕ್ರಮ ಆಗಿಲ್ಲ. ಮುಖ್ಯಮಂತ್ರಿಗಳಿಗೆ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ನೀವು ಪಾದಯಾತ್ರೆ ಮಾಡಿದ್ದೀರಿ, ಏನೆಲ್ಲಾ ಮಾಡಿದ್ದೀರಿ. ನಾನು ಜೈಲಿಗೆ ಹೋಗೋದು, ಮತ್ತೆ ಆಯ್ಕೆಯಾಗಿ ಬರೋದು ಎಲ್ಲಾ ಭಗವಂತನ ಇಚ್ಛೆ. ಬಳ್ಳಾರಿಯಲ್ಲಿ ನಾವೇ ಸಂಪೂರ್ಣ ಗೆಲ್ಲಬಹುದು, ಸೋಲಬಹುದು. ನೀವು ಅಧಿಕಾರ ಬಳಸಿಕೊಂಡು ಅಭಿವೃದ್ಧಿ ಮಾಡಿ. ಅದು ಬಿಟ್ಟು ಬಳ್ಳಾರಿಯಲ್ಲಿ ಬಾಂಬು, ಗನ್ ಮಾತನಾಡುತ್ತಿದೆ. ಇಡೀ ಪ್ರಕರಣ ತನಿಖೆಗೆ ನೀಡಬೇಕು. ಮೇಲೆ ನಂಬಿಕೆ ಇಲ್ಲದಿದ್ದರೆ ಹೈಕೋರ್ಟ್ ಹಾಲಿ ನ್ಯಾಯಾಧೀಶರಿಗೆ ತನಿಖೆಗೆ ನೀಡಬೇಕು. ಈ ಮೂಲಕ ಬಳ್ಳಾರಿ ಜನತೆಯ ಹಿತ ಕಾಪಾಡಬೇಕು. ಕಾನೂನು ಕ್ರಮ ಕೂಡಲೇ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

'ಕಾನೂನು ಕ್ರಮ ತೆಗೆದುಕೊಳ್ಳದಿದ್ದರೆ, ನಾನು ಕಾನೂನು ಹೋರಾಟ ಮಾಡುತ್ತೇನೆ. ನನ್ನ ಕಚೇರಿಯ ಹತ್ತು ಅಡಿ ದೂರದಲ್ಲೇ ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಗುಂಡು ಹಾರಿಸಲಾಯಿತು. ಶಾಸಕನ ಖಾಸಗಿ ಗನ್‌ಮ್ಯಾನ್‌ಗಳಿಂದಲೇ ಫೈರಿಂಗ್ ಆಗಿದ್ದು ಅಂತ ಎಸ್‌ಪಿ ಹೇಳಿದರು. ಸಿಎಂ ಅವರು ಗಂಭೀರವಾಗಿ ಅವರ ಮನೆ ಬಳಿ ಬ್ಯಾನರ್ ಯಾಕೆ ಕಟ್ಟಿದ್ರು ಅಂತ ಹೇಳಿದರು. ಆದರೆ ಡಿಸಿಎಂ ಅವರು ತಮ್ಮ ಪಕ್ಷದ ಶಾಸಕನ ಪರ ನಿಂತ್ಕೊಂಡರು. ಆ ಶಾಸಕನ ತಪ್ಪಿದರೂ ಡಿಸಿಎಂ ಪರ ನಿಂತರು ಎಂದು ದೂರಿದರು.

ನಾನು ಈ ಪ್ರಕರಣ ಇಲ್ಲಿಗೇ ಬಿಡಲ್ಲ, ಹೋರಾಟ ಮಾಡುತ್ತೇನೆ. ಬಳ್ಳಾರಿ ನಗರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ನಗರದ ವಾರ್ಡ್‌ಗಳಲ್ಲಿ ಯಂಗ್‌ಸ್ಟರ್ಸ್ ಗ್ಯಾಂಗ್‌ಸ್ಟರ್ಸ್ ಆಗಿ ಹೋಗಿದ್ದಾರೆ. ಜನಾರ್ದನ ರೆಡ್ಡಿ ಕುಟುಂಬ ಅಂತ್ಯ ಮಾಡಲು ಹೊರಟಿದ್ದಾರೆ. ಸಿಎಂ ಅವರಿಗೆ ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ರಾಜಕೀಯವಾಗಿ ನಮ್ಮ ನಿಮ್ಮ ಹೋರಾಟ, ಪಾದಯಾತ್ರೆ

3ನೇ ಪುಟಕ್ಕೆ

ರಾಜ್ಯಮಟ್ಟದ ಪುರುಷರ ದೇಹದಾರ್ಢ್ಯ ಸ್ಪರ್ಧೆ ★ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ವಿಶೇಷತೆ

ಕಿರೀಟ ಮುಡಿಗೇರಿಸಿಕೊಂಡ ಬೆಳಗಾವಿ ಜಿಲ್ಲೆಯ ಕುವರ ಪ್ರಶಾಂತ ಕನ್ನೂರಕರ

ರಾಯಚೂರು,ಜ.29

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026 ನಿಮತ್ತ ಜನವರಿ 28ರಂದು ರಾಯಚೂರನಲ್ಲಿ ನಡೆದ ರಾಜ್ಯ ಮಟ್ಟದ ಪುರುಷರ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಬೆಳಗಾವಿ ಜಿಲ್ಲೆಯ ದೇಹದಾರ್ಢ್ಯ ಪಟು ಪ್ರಶಾಂತ ಕನ್ನೂರಕರ ಅವರು ಮಿಸ್ಟರ್ ರಾಯಚೂರು ಉತ್ಸವ-2026ರ ಕಿರೀಟವನ್ನು ಮುಡಿಗೇರಿಸಿಕೊಂಡರು.

ಬೆಳಗಾವಿಯ ಮತ್ತೊಬ್ಬ ದೇಹದಾರ್ಢ್ಯ ಪಟು ಪ್ರತಾಪ ವಿಠ್ಠಲ್ ಕಲಕುಂದ್ರಿಕರ ಅವರು ರನರ್ ಆಫ್ ಆಗಿ ಹೊರಹೊಮ್ಮಿದರು.

ರಾಯಚೂರಿನ ವೃಷಭ್ ವಶಿಷ್ಠ ಅವರು ಬೆಸ್ಟ್ ಪೋಜರ್ ಸ್ಥಾನಕ್ಕೆ



ತೃಪ್ತಿಪಟ್ಟರು.

ವಿಜೇತರಿಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕಾಂದೂ, ಮಹಾನಗರ ಪಾಲಿಕೆ ಕಮಿಷನರ್ ಜುಬಿನ್ ಮೋಹಪಾತ್ರ, ರಾಯಚೂರು ಜಿಲ್ಲಾ ದೇಹದಾರ್ಢ್ಯ ಸಂಘದ ಅಧ್ಯಕ್ಷರಾದ ಮಂಜುನಾಥ ಹಾನಗಲ್, ಸಂಘದ ಫೌಂಡರ್ ಹಾಗೂ ಕಾರ್ಯದರ್ಶಿ ಸುಧಾಕರ ಕುರುಡಿ ಅವರು ವಿಜೇತರಿಗೆ ಟ್ರಾಫಿ, ಮೆಡಲ್, ಪ್ರಮಾಣ ಪತ್ರ ಮತ್ತು ಕ್ರಮವಾಗಿ ಪ್ರಥಮ ಬಹುಮಾನ 30,000 ರೂ, ದ್ವಿತೀಯ ಬಹುಮಾನ 10,000 ರೂ ಹಾಗೂ ತೃತೀಯ ಬಹುಮಾನ 5000 ರೂ.ಗಳನ್ನು ನೀಡಿ ಸನ್ಮಾನಿಸಿ ಗೌರವಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಯಚೂರು ಜಿಲ್ಲಾ ದೇಹದಾರ್ಢ್ಯ ಸಂಘ ಹಾಗೂ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಗಳ ಸಹಯೋಗದಲ್ಲಿ ನಗರದ ಮಹಾತ್ಮ ಗಾಂಧೀ ಜಿಲ್ಲಾ ಕ್ರೀಡಾಂಗಣದಲ್ಲಿ ಈ ದೇಹದಾರ್ಢ್ಯ ಸ್ಪರ್ಧೆ ನಡೆಯಿತು.

ಗಂಗಾಧರ ಎಂ., ಶಂಕರ ಪಿಲ್ಲೆ, ಮೈಬೂಬ್, ಸುಧಾಕರ, ಸುನೀಲ್ ರಾವುತ್, ಕಿರಣಕುಮಾರ, ಸಬರುದ್ದೀನ್ ಪಾಶಾ ಸೇರಿದಂತೆ ಇನ್ನಿತರರು ನಿರ್ಣಾಯಕರಾಗಿ ಕಾರ್ಯ ನಿರ್ವಹಿಸಿದರು.

55 ಕೆ.ಜಿ., 60 ಕೆ.ಜಿ.,65 ಕೆ.ಜಿ.,70 ಕೆ.ಜಿ., 75 ಕೆ.ಜಿ.,80

3ನೇ ಪುಟಕ್ಕೆ

ಜಹೀರಾಬಾದ್ ಬಡಾವಣೆಗಳಲ್ಲಿ ಜನಸಂಪರ್ಕ ಸಭೆ



ರಾಯಚೂರು.ಜ.28-

ರಾಯಚೂರು ಜಿಲ್ಲಾ ಪೊಲೀಸ್ ನೇತಾಜಿ ನಗರ ಪೊಲೀಸ್ ಠಾಣೆವತಿಯಿಂದ ಹಾಗೂ ರಾಯಚೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ರವೀಂದ್ರ ಜಲ್ದಾರ್ ನೇತೃತ್ವದಲ್ಲಿ ವಾರ್ಡ್ ನಂ 13ರ ಅಶೋಕ ನಗರ ಮತ್ತು ಜಹೀರಾಬಾದ್ ಬಡಾವಣೆಗಳಲ್ಲಿ ಜನಸಂಪರ್ಕ ಸಭೆ ಹಮ್ಮಿಕೊಳ್ಳಲಾಯಿತು.

ಡಿವೈಎಸ್ಪಿ ಶಾಂತವೀರ ಸಿಪಿಐ ನಾಗರಾಜ್ ಮೇಕಾ, ನಿವೃತ್ತ ಪೋಲೀಸ್ ಸರ್ಕಲ್ ಯಂಕಪ್ಪ ಪಿಎಸ್‌ಐ ಬಸವರಾಜ್ ಹಾಗೂ ರವೀಂದ್ರ ಜಲ್ದಾರ್ ರವರು ಭಾಗವಹಿಸಿದ್ದರು.

ಪ್ರಸ್ತಾವಿಕವಾಗಿ ರವೀಂದ್ರ ಜಲ್ದಾರ್ ಮಾತನಾಡಿ ಬಡಾವಣೆಯ ಬಗ್ಗೆ ಮಾಹಿತಿ ನೀಡಿ ಪೊಲೀಸ್ ರ ಬಗ್ಗೆ ಹಾಗೂ ಗಾಂಜ, ಹತ್ಯೆಗಳು, ಮತ್ತು ಮಕ್ಕಳ ಪಾಲನೆ ಪೋಷಣೆ ಹಾಗೂ ಅಹಿತರ ಘಟನೆಗಳ ಬಗ್ಗೆ ಮಾತನಾಡಿದರು.

ಸಿಪಿಐ ನಾಗರಾಜ್ ಮೇಕಾ ಸ್ವಾಗತ ಕೋರುತ್ತಾ ವಾರ್ಡ್ ನಂ 13 ಅಹಿತರ ಘಟನೆಗಳ ನಡೆದ ತಕ್ಷಣವೇ ಗಾಂಜ, ಮಟಕ, ವಿಲ್ ಡ್ರೈವ್, ಚಿಕ್ಕ ಪುಟ್ಟ ಜಗಳ ಮತ್ತು ಹತ್ಯೆಗಳ ಬಗ್ಗೆ ಹಾಗೆ ಪೋಲಿ ಹುಡುಗರ ತಪ್ಪು ಮಾಡಿದಾಗ ರಾಜಕಾರಣಿಗಳು ಕರೆ ಮಾಡಿ ಅವರನ್ನು ಸಪೋರ್ಟ್ ಮಾಡಬೇಡಿ ಎಂದು ತಿಳಿಸಿದರು.

ನಿವೃತ್ತ ಡಿವೈಎಸ್ಪಿ ಯಂಕಪ್ಪ ಅವರ ರಾಜಕಾರಣಿಗಳು ಇದರಲ್ಲಿ ತಲೆಹಾಕುವ ಪೊಲೀಸ್ ಎಗ್ಗುಗುಟುವ ಮಾಡುವ ಮೂಲಕ ಪೊಲೀಸ್ರ ಮೇಲೆ ಜನಕ್ಕೆ ಹೆದರಿಕೆ ಹೋಗಿದೆ. ಹಾಗೆ ಅಹಿತಕರ ಘಟನೆ ಪೊಲಿಸ್ರ ಪೀಕ್ ಟೈಮ್ ಚೇಜ್

3ನೇ ಪುಟಕ್ಕೆ

ಫೆಬ್ರವರಿ 10ರಂದು ಗ್ರಾಹಕರ ಕುಂದು ಕೊರತೆ ಸಭೆ

ರಾಯಚೂರು,ಜ.29-

ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗ ಅಧೀಕ್ಷಕ ಅಭಿಯಂತರರು ಇವರ ಅಧ್ಯಕ್ಷತೆಯಲ್ಲಿ ಫೆಬ್ರವರಿ 10 ಬೆಳಗ್ಗೆ 10ಗೆ ಗ್ರಾಹಕರ ಕುಂದು ಕೊರತೆ ಸಂವಾದ ಸಭೆ ಹಮ್ಮಿಕೊಳ್ಳಲಾಗಿದ್ದು, ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯುತ್ ಗ್ರಾಹಕರು ಹಾಜರಾಗಿ ವಿದ್ಯುತ್ ದೂರುಗಳ ಬಗ್ಗೆ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ

ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರಕ್ಕೆ ಜಿ.ಪಂ ಸಿಇಓ ಚಾಲನೆ

ಗ್ರಾ.ಪಂಚಾಯತ ಮಟ್ಟದಿಂದ ಸರಿಯಾದ ಮಾಹಿತಿ ನೀಡಿ: ಈಶ್ವರ ಕುಮಾರ್

ರಾಯಚೂರು ಜನವರಿ 29 (ಕರ್ನಾಟಕ ವಾರ್ತೆ): ಜಿಲ್ಲಾ ಮಾನವ ಅಭಿವೃದ್ಧಿ-2025 ಮತ್ತು ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ-2031ರವರೆಗೆ ವರದಿ ತಯಾರಿಕೆಗೆ ಹಾಗೂ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾದ ವರದಿ ತಯಾರಿಕೆಗಾಗಿ ಜಿಲ್ಲೆಯ ಪ್ರತಿಯೊಂದು ಗ್ರಾಮ ಪಂಚಾಯತಿ ಮಟ್ಟದಿಂದ ಸರಿಯಾದ ಮಾಹಿತಿಯನ್ನು ನೀಡಬೇಕೆಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಹೇಳಿದರು.

ಜನವರಿ 29ರ ಗುರುವಾರ ದಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಾನವ ಅಭಿವೃದ್ಧಿ ವರದಿ-2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ-2031 ವರದಿಗಳ ತಯಾರಿಕೆ ಕುರಿತು ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಯಚೂರು ಜಿಲ್ಲೆಯು ಮಹತ್ವಾಕಾಂಕ್ಷೆ ಜಿಲ್ಲೆಯಾಗಿದೆ. ಅಲ್ಲದೆ ಇಲ್ಲಿನ ಎರಡು ತಾಲೂಕುಗಳು ಬ್ಲಾಕ್ ಮಹತ್ವಾಕಾಂಕ್ಷೆ ಜಿಲ್ಲೆಯಾಗಿದ್ದು, ಜಿಲ್ಲೆಯಲ್ಲಿನ ಎಸ್.ಎಸ್.ಎಲ್.ಸಿ ಹಾಗೂ



ಪಿಯುಸಿ ಫಲಿತಾಂಶ, ಆರೋಗ್ಯ, ಕೃಷಿ ಕ್ಷೇತ್ರ, ಸೇರಿದಂತೆ ಇತರೆ ಕ್ಷೇತ್ರದಲ್ಲಿ ಹೇಗೆ ವರದಿಯನ್ನು ತಯಾರಿಸಬೇಕೆಂದು ತರಬೇತಿ ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಗುತ್ತದೆ. ಎಲ್ಲಾ ಅಧಿಕಾರಿಗಳು ಸರಿಯಾಗಿ ತಿಳಿದುಕೊಳ್ಳಬೇಕು ಎಂದರು.

ಮಾಹಿತಿ ನೀಡುವ ಸಂಬಧದಲ್ಲಿ ಕೆಳಮಟ್ಟದ ಅಧಿಕಾರಿ ನೀಡುವ ಮಾಹಿತಿಯನ್ನು ಕ್ರಾಸ್ ಚೆಕ್ ಮಾಡಬೇಕು. ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಜಿಲ್ಲೆಯ ಜನರ ಕಲ್ಯಾಣ, ಶಿಕ್ಷಣ, ಆರೋಗ್ಯ ಮತ್ತು ಆದಾಯದಂತಹ ಅಂಶಗಳನ್ನು ಅಳೆಯಲು ಬಹಳ ಮುಖ್ಯವಾದ ವರದಿಯಾಗಿದ್ದು, ಎಲ್ಲಾ ಇಲಾಖೆ ಅಧಿಕಾರಿಗಳು ವರದಿ ತಯಾರಿಕೆ ಪ್ರಕ್ರಿಯೆಗೆ ಸಂಬಧಿಸಿದ ಮಾಹಿತಿಯನ್ನು ನೀಡುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಬೇಕೆಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಧಿಸಿದ ಅಧಿಕಾರಿಗಳಿಂದ ಸೂಚಿಸಿದರು.

ಈ ವೇಳೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಿರಿಯ ನಿರ್ದೇಶಕ ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ನಿರ್ದೇಶಕ ಬಸವರಾಜು ಎಸ್. ಮಾತನಾಡಿ, ಜಿಲ್ಲೆಗಳ ಮಾನವ ಅಭಿವೃದ್ಧಿ 2025 ಸಿದ್ದಪಡಿಸಲು ಎಲ್ಲಾ 31 ಜಿಲ್ಲೆಗಳಲ್ಲಿಯೂ ತರಬೇತಿ ನಡೆಸಲಾಗುವುದು. ಆರೋಗ್ಯ, ಶಿಕ್ಷಣ ಹಾಗೂ ಜನಗಳ ಜೀವನ ಮಟ್ಟದ ಮೇಲೆ ಅಭಿವೃದ್ಧಿಯ ಅಂಶಗಳು ಒಳಪಟ್ಟಿದೆ. 2015ರ ನಂತರ ಈ ಕುರಿತು ವರದಿ ಮಂಡನೆಯಾಗಿಲ್ಲ. ವಿವಿಧ ಮುಖ್ಯ ಇಲಾಖೆಗಳ ಜೊತೆಗೂಡಿ ಈ ವರದಿಯನ್ನು ತಯಾರಿಸಲು ಸಹಕರಿಸಬೇಕು ಎಂದು ಕೋರಿದರು.

ರಾಜ್ಯ ಸರ್ಕಾರದ ಗ್ಯಾರೆಂಟಿ ಯೋಜನೆಗಳು ಜನಸಾಮಾನ್ಯರ ಮೇಲೆ ಬೀರಿರುವ ಪ್ರಭಾವ, ಜಿಲ್ಲೆ ಅಳವಡಿಸಿಕೊಂಡಿರುವ ಉತ್ತಮ ಅಭ್ಯಾಸಗಳು, ಇತರ ಜಿಲ್ಲೆಗಳಿಂದ ತೆಗೆದುಕೊಳ್ಳಬಹುದಾದ ಒಳ್ಳೆಯ ಮಾದರಿಗಳು

3ನೇ ಪುಟಕ್ಕೆ

ಲಕ್ಷ್ಮಣ ಲೇಔಟ್ ನಿವಾಸಿಯಾದ ಅಲ್ಬರ್ಟ ಜಾನ್ ಕಾಣೆ: ಪತ್ತೆಗೆ ನೇತಾಜಿ ನಗರ ಪೊಲೀಸರ ಮನವಿ

ರಾಯಚೂರು ಜನವರಿ 29

ಇಲ್ಲಿನ ನೇತಾಜಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಲಕ್ಷ್ಮಣ ಲೇಔಟ್ ನಿವಾಸಿಯಾದ ಅಲ್ಬರ್ಟ ಜಾನ್ ತಂದೆ ಜಾನ್ ಬಾಸ್ಕರ್ (41) ಎಂಬ ಯುವಕ ಜನವರಿ 08ರ ಬೆಳಿಗ್ಗೆ 05 ಗಂಟೆಯ ಸುಮಾರಿಗೆ ಟಿಫಿನ್ ತೆಗೆದುಕೊಂಡು ಬರುತ್ತೇನೆ ಅಂತಾ ಹೇಳಿ ಹೋದವನ್ನು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಠಾಣೆಯಲ್ಲಿ ಅಪರಾಧ ಸಂಖ್ಯೆ:04/2026 ಕಲಂ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.



ಚಹರೆ ಪಟ್ಟಿ: ವಯಸ್ಸು : 41, 5.6 ಫೀಟ್ ಎತ್ತರ, ದುಂಡು ಮುಖ, ಸಧೃದ ಮೈ ಕಟ್ಟು, ಸಾದ ಕೆಂಪು ಮೈ ಬಣ್ಣ, ತಲೆಯಲ್ಲಿ ಕಪ್ಪು ಬಣ್ಣದ ಕೂದಲು, ಕುರುಚಲ ಗಡ್ಡ, ಬಲಗಡೆ ಕಪ್ಪು ಬಣ್ಣದ ನರ್ಲೇ, ಗಾಢಕಂದು ಬಣ್ಣದ ಪ್ಯಾಂಟ್, ತಿಳಿ ಹಸಿರು ಬಣ್ಣದ ತುಂಬು ತೋಳಿನ ಶರ್ಟ ಧರಿಸಲಾಗಿದ್ದು, ತೆಲುಗು, ಹಿಂದಿ, ಇಂಗ್ಲೀಷ ಹಾಗೂ ಕನ್ನಡ ಭಾಷೆ ಮಾತನಾಡುತ್ತಾರೆ.

ಈ ಚಹರೆವುಳ್ಳ ಮನುಷ್ಯ ಕಂಡಲ್ಲಿ ಮತ್ತು ಸುಳಿವು ಸಿಕ್ಕಲ್ಲಿ ನೇತಾಜಿ ನಗರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08532-240222 ಅಥವಾ

3ನೇ ಪುಟಕ್ಕೆ

ನಂದಾ ಕಟ್ಟಿಮನಿ ಬಳಗದ ವತಿಯಿಂದ 500 ಜನರಿಗೆ ಲ್ಯಾಂಡ್ ಲಾರ್ಡ್ ಚಿತ್ರ ವೀಕ್ಷಣೆಗೆ ಉಚಿತ ಪ್ರವೇಶ

ರಾಯಚೂರು,ಜ.29 -

ನಂದಾ ಕಟ್ಟಿಮನಿ ಬಳಗದ ವತಿಯಿಂದ ದುನಿಯಾ ವಿಜಯ್ ಅಭಿನಯದ ಹೊಚ್ಚ ಹೊಸ ಲ್ಯಾಂಡ್ ಲಾರ್ಡ್ ಚಲನಚಿತ್ರವನ್ನು ಕೇಕ್ ಕತ್ತರಿಸುವ ಮೂಲಕ ಬುಧವಾರ ಮಿರಾಜ್ ಟಾಕೀಸ್ ನಲ್ಲಿ ರಾಯಚೂರು ನಗರದ ಸಂಘ ಸಂಸ್ಥೆಗಳು ಹಾಗೂ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಮಹಿಳೆಯರಿಗೆ ಸೇರಿದಂತೆ ಎಲ್ಲಾ ಸಾರ್ವಜನಿಕರಿಗೆ ಉಚಿತ ಚಲನಚಿತ್ರ ಪ್ರದರ್ಶನದ ವ್ಯವಸ್ಥೆ ಮಾಡಲಾಗಿತ್ತು ಈ ಪ್ರದರ್ಶನವನ್ನು ನೋಡಲು 500 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ಚಲನಚಿತ್ರ ನೋಡಲು ಬಂದಂತ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸೇರಿದಂತೆ ಎಲ್ಲಾ ಜನರಿಗೆ ನಂದಾ ಕಟ್ಟಿಮನಿ ಬಳಗದ ವತಿಯಿಂದ ಬೆಳಿಗ್ಗೆ ಉಪಹಾರ



ವ್ಯವಸ್ಥೆಯನ್ನು ಕೂಡ ಕಲ್ಪಿಸಲಾಗಿತ್ತು.

ದುನಿಯಾ ವಿಜಯ್ ನಾಯಕನಾಗಿ ನಟಿಸಿರುವ 'ಲ್ಯಾಂಡ್ ಲಾರ್ಡ್' ಚಿತ್ರವು ಸಮಾಜದ ವಾಸ್ತವಿಕ ಸಮಸ್ಯೆಗಳು, ಭೂಮಾಲೀಕರ ದರ್ಪ ಮತ್ತು ಜೀತದಾಳುವಿನ ನೋವನ್ನು ಎತ್ತಿಹಿಡಿಯುವ ಪ್ರಬಲ ಸಾಮಾಜಿಕ ಸಂದೇಶದ ಚಿತ್ರವಾಗಿದೆ. ಜಡೇಶ್ ಕೆ. ಹಂಪಿ ನಿರ್ದೇಶನದ ಈ ಕಲಾತ್ಮಕ ಚಿತ್ರವು, ದೌರ್ಜನ್ಯದ ವಿರುದ್ಧದ ಹೋರಾಟದ ಮೂಲಕ ಯುವಜನತೆಯಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ 'ದಿಟ್ಟ ಪ್ರಯತ್ನ' ಎಂದು ಶ್ಲಾಘಿಸಲಾಗಿದೆ.

ಚಿತ್ರವನ್ನು ಉದ್ದೇಶಿಸಿ ವಿದ್ಯಾರ್ಥಿಗಳು ಮಾತನಾಡಿ, ಇದು ಕೇವಲ ಮನರಂಜನೆಯಲ್ಲ, ಬದಲಾಗಿ ಇಂದಿನ ಪೀಳಿಗೆಯೂ ತಿಳಿಯಬೇಕಾದ ಸಾಮಾಜಿಕ ವಾಸ್ತವಗಳನ್ನು ತೋರಿಸುತ್ತದೆ. ಭೂಮಾಮೀಲೀಕರ ದಬ್ಬಾಳಿಕೆಗೆ ಒಳಗಾದ ಕುಟುಂಬವು ಹೇಗೆ ಸೆಟೆದು ನಿಲ್ಲುತ್ತದೆ ಎಂಬ ಕಥಾಹಂದರ ವಿದ್ಯಾರ್ಥಿಗಳಲ್ಲಿ ಧೈರ್ಯ ಮತ್ತು ಸಮಾನತೆಯ ಮನೋಭಾವವನ್ನು ಮೂಡಿಸುತ್ತದೆ. ಕೇವಲ ವಾಣಿಜ್ಯಕವಾಗಿರದೆ, ಸಾಮಾಜಿಕ ಕಳಕಳಿಯೊಂದಿಗೆ ಕಲಾತ್ಮಕವಾಗಿ ಮೂಡಿಬಂದಿರುವ ಚಿತ್ರವಿದು. ಸಮಾಜದ ನೋವು-ನಲಿವುಗಳನ್ನು ಪ್ರತಿಬಿಂಬಿಸುವ ಈ ಚಿತ್ರವನ್ನು ಪ್ರತಿಯೊಬ್ಬರೂ ನೋಡಬೇಕಾದ ಚಿತ್ರವಿದು. ಒಟ್ಟಾರೆಯಾಗಿ ಸಮಾಜದಲ್ಲಿನ ಸಮಾನತೆ, ನ್ಯಾಯ ಮತ್ತು ಸಂವಿಧಾನದ ಮೌಲ್ಯಗಳ ಬಗ್ಗೆ ಚಿಂತನೆ ಮೂಡಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿದೆ ಎಂದ ಅವರು, ಈ ಚಿತ್ರವನ್ನು ಪ್ರತಿಯೊಬ್ಬರೂ ನೋಡಿ ಪ್ರೋತ್ಸಾಹಿಸಬೇಕು ಹಾಗೂ ಈ ಚಿತ್ರವನ್ನು ಉಚಿತವಾಗಿ ನೋಡಲು

3ನೇ ಪುಟಕ್ಕೆ

ಸಡಗರದ ಉತ್ಸವ ಅಭೂತಪೂರ್ವ ಯಶಸ್ಸು ಕಾಣಲಿ-ರತ್ನಮ್ಮ ದೇಸಾಯಿ

ರಾಯಚೂರು ಜ. 29-

ಜಿಲ್ಲೆಯಲ್ಲಿ ಎಡೆದೊರೆ ನಾಡು ರಾಯಚೂರು ಉತ್ಸವ ನಡೆಯುತ್ತಿರುವುದು ತುಂಬಾ ಖುಷಿಯ ಸಂಗತಿ. ಎರಡು ದಶಕಗಳ ನಂತರ ಆಯೋಜನೆಗೊಂಡಿರುವ ಉತ್ಸವವು ಯಶಸ್ವಿಯಾಗಲೆಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ರತ್ನಮ್ಮ ದೇಸಾಯಿ ಪತ್ರಿಕೆಗೆ ತಿಳಿಸಿದ್ದಾರೆ.



ಕಲೆ, ಸಾಹಿತ್ಯ, ಸಂಸ್ಕೃತಿಗೆ ಹೆಸರಾಗಿರುವ ರಾಯಚೂರು ಜಿಲ್ಲೆಯಲ್ಲಿ ಉತ್ಸವ ಅದ್ದೂರಿಯಾಗಿ ನಡೆಯಲು ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದೆ. ಅನೇಕ ವರ್ಷಗಳ ನಂತರ ಜಿಲ್ಲೆಯಲ್ಲಿ ನಡೆಯುತ್ತಿರುವ ದೊಡ್ಡ ಹಬ್ಬದಲ್ಲಿ ಎಲ್ಲ ವರ್ಗದ ಜನರು ಕುಟುಂಬ ಸಮೇತ ಪಾಲ್ಗೊಂಡು ಕಲೆ, ಸಂಸ್ಕೃತಿಗೆ ಪ್ರೋತ್ಸಾಹ ನೀಡಲಿ. ನಾಡಿನ ಸೊಗಡನ್ನು, ಐತಿಹಾಸಿಕ ಹಿನ್ನೆಲೆಯನ್ನು ಸಾರುವ ಸಡಗರದ ಹಬ್ಬಕ್ಕೆ ಎಲ್ಲರೂ ಕೈ ಜೋಡಿಸುವಂತಾಗಲಿ ಎನ್ನುವುದು ನಮ್ಮ ಸದಾಶಯವಾಗಿದೆ. ಜಿಲ್ಲಾಡಳಿತದ ನೇತೃತ್ವದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ, ಜಿಪಂ ಮತ್ತು ಜನಪ್ರತಿನಿಧಿಗಳು ಸೇರಿಕೊಂಡು ಉತ್ಸವ ಹಮ್ಮಿಕೊಂಡಿರುವುದು ಜಿಲ್ಲೆಗೆ ಹೊಸ ಕಳೆ ತಂದುಕೊಟ್ಟಂತಾಗಿದೆ. ಮಕ್ಕಳಿಗಾಗಿ ಪ್ರತ್ಯೇಕ ಉತ್ಸವ ನಡೆಸುತ್ತಿರುವುದರಿಂದ ಶಾಲೆ, ಕಾಲೇಜಿನ ಮಕ್ಕಳು ಉತ್ಸಾಹದಿಂದ ಭಾಗಿಯಾಗಿ ಅಭೂತಪೂರ್ವ ಯಶಸ್ಸು ಸಿಗಲಿ. ಪ್ರತಿಭಾನ್ವಿತ ಕಲಾವಿದರಿಗೆ ಉತ್ಸವದಲ್ಲಿ ವಿಶೇಷ ಆದ್ಯತೆ ನೀಡಲಾಗಿದ್ದು ಎಲ್ಲ ಪ್ರತಿಭೆಗಳು ಮಿಂಚಲಿ, ಜಿಲ್ಲಾ ಆಡಳಿತ ಶ್ರಮ ಸಾರ್ಥಕವಾಗಲಿ. ಫೆ. 5 6 7ರಂದು ನಡೆಯುವ ಉತ್ಸವದ ಮೂಲಕ ಜಿಲ್ಲೆಯ ಖದರ್ ಹೆಚ್ಚಲಿ, ಖುಷಿ ಇಮ್ಮಡಿಯಾಗಲಿ ಎಂದು ಹಿರಿಯ ರಂಗಭೂಮಿ ಕಲಾವಿದೆ ಸಿರವಾರದ ರತ್ನಮ್ಮ ದೇಸಾಯಿ ಹೇಳಿದ್ದಾರೆ.

ನಗರದಲ್ಲಿ 24ಘಿ7 ನಿರಂತರ ನೀರು ಸರಬರಾಜು ಯೋಜನೆ ಅನುಷ್ಠಾನ

ಮ್ಯಾಪಿಂಗ್ (ನೀರು ಸರಬರಾಜು ಕ್ಷೇತ್ರದ) ಸಮೀಕ್ಷೆಗೆ ಚಾಲನೆ



ಕಲಬುರಗಿ,ಜ.29-

ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕುಸ್ಸೆಂಫ್) ಅಡಿಯಲ್ಲಿ ಕಲಬುರಗಿ ನಗರದಲ್ಲಿ 24ಘಿ7 ನಿರಂತರ ನೀರು ಸರಬರಾಜು ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಪಾಲಿಕೆಯ ವಾರ್ಡ್ ನಂ. 9, 25, 26, 27, 35, 39 ಹಾಗೂ 41 ಜೋನ್ ನಂ. 30 ರಲ್ಲಿ ಮ್ಯಾಪಿಂಗ್ ಸಮೀಕ್ಷೆಗೆ ವಾರ್ಡ್ ನಂ. 09ರ ನಗರದ ಸಂಗಮೇಶ್ವರ ಕಾಲೋನಿಯಲ್ಲಿ ಬುಧವಾರ ಮಹಾನಗರ ಪಾಲಿಕೆಯ ವಾರ್ಡ್ ನಂ. 9ರ ಚುನಾಯಿತ ಸದಸ್ಯರಾದ ಸುನೀಲ ಬನಶೆಟ್ಟಿ ಅವರು ಮ್ಯಾಪಿಂಗ್ ಸಮೀಕ್ಷೆಗೆ ಚಾಲನೆ ನೀಡಿದರು.

ಈ ಯೋಜನೆಯಡಿ ನಗರದಲ್ಲಿರುವ ಪ್ರತಿ ಮನೆಗೆ ನಳ ಸಂಪರ್ಕ ಒದಗಿಸುವ ಗುರಿ ಹೊಂದಿದ್ದು, ಇದಕ್ಕಾಗಿ ನಳ ಸಂಪರ್ಕದ ಪೂರ್ವದಲ್ಲಿ ಗ್ರಾಹಕರ-ನೀರು ಬಳಕೆದಾರರ ಮಾಹಿತಿ ಸಂಗ್ರಹಿಸಲಾಗುತ್ತಿದೆ. ನಗರದಲ್ಲಿರುವ 55 ವಾರ್ಡ್‌ಗಳನ್ನು 47 ಜೋನ್‌ಗಳಾಗಿ ಹಾಗೂ 64 ಡಿಎಮ್‌ಎ (ಆಂಂ) ಗಳಾಗಿ ವಿಂಗಡಿಸಲಾಗಿದೆ. ಪ್ರತಿ ಜೋನ್‌ನ್ನು ಪ್ರತ್ಯೇಕವಾಗಿ ಮ್ಯಾಪಿಂಗ್ ನೀರು ಸರಬರಾಜು ಕ್ಷೇತ್ರದ ಸಮೀಕ್ಷೆ ಮಾಡಲಾಗುತ್ತಿದೆ.

ಈ ಜೋನ್‌ನಲ್ಲಿ ದೇವಿನಗರ, ಸಂತೋಷ ಕಾಲೋನಿ, ಜೆ.ಆರ್. ನಗರ, ವಿವೇಕಾನಂದ ನಗರ, ಆಳಂದ ಕಾಲೋನಿ ಹಾಗೂ ಕೈಲಾಸ ನಗರ ಮತ್ತಿತರ ಪ್ರದೇಶಗಳಲ್ಲಿ ಮ್ಯಾಪಿಂಗ್ ಸರ್ವೇ ಮಾಡಲಾಗುವುದು. ಅಂದಾಜು 8,753 ಮನೆಗಳ ಸಮೀಕ್ಷೆ ಕೈಗೊಳ್ಳಬಹುದಾಗಿದೆ ಎಂದು ಮೆ|| ಎಲ್ ಆಂಡ್ ಟಿ ಕಂಪನಿಯ ಸಾಮಾಜಿಕ ತಜ್ಞರಾದ ಲಿಂಗರಾಜ್ ಹೀರಾ ಅವರು ತಿಳಿಸಿದರು.

ಜೋನ್‌ಗಳ ಮ್ಯಾಪಿಂಗ್ ಸಮೀಕ್ಷೆಯಲ್ಲಿ ಈ ಜೋನ್‌ನಲ್ಲಿ ಬರುವ ಎಲ್ಲಾ ಗ್ರಾಹಕರ ಹಾಗೂ ಆಸ್ತಿಗಳ ಸಮೀಕ್ಷೆಯನ್ನು ಗಣಕ ಯಂತ್ರದ (ಟ್ಯಾಬ್) ಮೂಲಕ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಇದರಿಂದ

ಈ ಜೋನ್‌ನಲ್ಲಿರುವ ಗ್ರಾಹಕರನ್ನು ಅಧೀಕೃತ ನಳ ಸಂಪರ್ಕ ಹೊಂದಿದ ಗ್ರಾಹಕರು, ಅನಧೀಕೃತ ನಳ ಸಂಪರ್ಕದ ಗ್ರಾಹಕರು, ಹೊಸ ಸಂಪರ್ಕ ಹೊಂದಿರುವ ಗ್ರಾಹಕರು ಹಾಗೂ ನಳ ಸಂಪರ್ಕಗಳ ವಿಧಗಳು, ಗೃಹ ಬಳಕೆಗಾಗಿ ಗೃಹೇತರ ಬಳಕೆಗಾಗಿ ಹಾಗೂ ವಾಣಿಜ್ಯ ಬಳಕೆಗಾಗಿ ವಿಂಗಡಿಸಿದ ಈ ಜೋನ್‌ನಲ್ಲಿ ಇರುವ ನೀರು ಬಳಕೆದಾರರ ಸ್ಪಷ್ಟವಾದ ಮಾಹಿತಿ ಸಂಗ್ರಹಿಸಿ, ನಳ ಸಂಪರ್ಕದ ದಾಖಲಾತಿಗಳನ್ನು ಒದಗಿಸುವಂತೆ ಮಾಹಿತಿ ನೀಡಲಾಗುವುದು ಕಲಬುರಗಿ ಯೋಜನಾ ಅನುಷ್ಠಾನ ಘಟಕದ ಸಾರ್ವಜನಿಕ ಸಂಪರ್ಕ ಅಧಿಕಾರಿ ಶರಣು ಸಾಲಿಮನಿ ತಿಳಿಸಿದ್ದಾರೆ.

ಈ ಸಮೀಕ್ಷಾ ಕಾರ್ಯಕ್ರಮದಲ್ಲಿ ಯೋಜನಾ ಅನುಷ್ಠಾನ ಘಟಕದ ಸಮಾಜಿಕ ಅಭಿವೃದ್ಧಿ ಅಧಿಕಾರಿ ನಾಗಯ್ಯಾ ಹಿರೇಮಠ, ಮೆ|| ಸ್ಮೆಕ್ ಕನ್ಸಲ್ಟೇನ್ಸಿಯ ಸಾಮಾಜಿಕ ತಜ್ಞರಾದ ಯುವರಾಜ್ ಕಟ್ಟಿಮನಿ, ಎಲ್ ಆಂಡ್ ಟಿ ಕಂಪನಿ ಸಾಮಾಜಿಕ ತಜ್ಞರಾದ ಲಿಂಗರಾಜ ಆಳಂದ, ರೀತೇಶ ಗೌಳಿ, ಚಂದ್ರಶೇಖರ, ನೆರವು ಸಂಸ್ಥೆಯ ತಂಡದ ನಾಯಕರಾದ ಕೊಟ್ರಯ್ಯ ಹಾಗೂ ಸರ್ಕಾರೇತರ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳಿಂದ ಚಿಂಚೋಳಿ (ಹೆಚ್) ಗ್ರಾಮದಲ್ಲಿ ''ರೇಷ್ಮೆ ಮೇಳ''ಕ್ಕೆ ಚಾಲನೆ



ಕಲಬುರಗಿ,ಜ.27-

ಕೇಂದ್ರ ರೇಷ್ಮೆ ಮಂಡಳಿ, ರಾಜ್ಯ ರೇಷ್ಮೆ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವುಗಳ ಸಹಯೋಗದೊಂದಿಗೆ ಗುಣಮಟ್ಟದ ರೇಷ್ಮೆಗೂಡಿನಿಂದಗುಣ ಮಟ್ಟದ ರೇಷ್ಮೆ ಉತ್ಪಾದನೆಯೆಂಬ ಉದ್ದೇಶದೊಂದಿಗೆ ಇತ್ತೀಚೆಗೆ ಕಾಳಗಿ ತಾಲೂಕಿನ ಚಿಂಚೋಳಿ (ಹೆಚ್) ಗ್ರಾಮದ ಮೇ|| ಲುಂಬಿನಿ ಸ್ವಯಂ ಚಾಲಿತ ರೇಷ್ಮೆ ನೂಲು ಬಿಚ್ಚಾಣಿಕೆ ಘಟಕದಲ್ಲಿ ಆಯೋಜಿಸಲಾದ ರೇಷ್ಮೆ ಬೆಳೆಗಾರರು ಹಾಗೂ ನೂಲು ಬಿಚ್ಚಾಣಿಕೆದಾರರ ''ರೇಷ್ಮೆ ಮೇಳ''ಕ್ಕೆ ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ರೇಷ್ಮೆ ವಸ್ತು ಪ್ರದರ್ಶನ ಹಾಗೂ ತೋಟಗಾರಿಕೆ ವಸ್ತು ಪ್ರದರ್ಶನದ ಮಳಿಗೆ ಉದ್ಘಾಟಿಸಿ ರೇಷ್ಮೆ ಬೆಳೆಗಾರರು ಹಾಗೂ ನೂಲು ಬಿಚ್ಚಾಣಿಕೆದಾರರನ್ನು ಉದ್ದೇಶಿಸಿ ಮಾತನಾಡಿದರು. ನಂತರ ಅವರು ಉತ್ತಮ ರೇಷ್ಮೆ ಗೂಡು ಬೆಳೆದಂತಹ ಕಲಬುರಗಿ ಹಾಗೂ ಬೀದರ ಜಿಲ್ಲೆಗಳ ಪ್ರಗತಿಪರ ರೇಷ್ಮೆ ಬೆಳೆಗಾರರಿಗೆ ಪ್ರಶಂಸಾ ಪ್ರಮಾಣಪತ್ರ ವಿತರಿಸಿ ಸನ್ಮಾಸಿದರು.

ನಂತರ ಸ್ವಯಂ ನೂಲು ಬಿಚ್ಚಾಣಿಕೆ ಘಟಕದ ಕಾರ್ಯಚಟುವಟಿಕೆಯನ್ನು ವೀಕ್ಷಿಸಿದರು.

ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಪಂಚಾಯತ್ ರೇಷ್ಮೆ ಉಪನಿರ್ದೇಶಕ ಎಸ್.ಪ್ರಕಾಶ ಬಾಬು ಇಲಾಖಾ ಯೋಜನೆಗಳ ಬಗ್ಗೆ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಧಾರವಾಡ ಡಿ ಸಿ.ಎಸ್.ಬಿ.-ಸಿಎಸ್‌ಟಿಆರ್‌ಐ ವಿಜ್ಞಾನಿ ಎಸ್.ಎಮ್.ಹುಕ್ಕೇರಿ, ಕಲಬುರಗಿ ಜಿಲ್ಲಾ ಲೀಡ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ರವಿಗೌಡ, ಆರ್.ವಿ.ಎಸ್. ಟ್ರೇಡಿಂಗ್ ಕಂಪನಿಯ ಸಿ.ಇ.ಓ. ರೇಷ್ಮಾ ಎ.ಕೆ., ತೋಟಗಾರಿಕೆ ಜಂಟಿ ನಿರ್ದೇಶಕ ಸಂತೋಷ ಇನಾಮದಾರ, ಬೀದರ್ ಜಿಲ್ಲಾ ಪಂಚಾಯತ್ ರೇಷ್ಮೆ ಉಪನಿರ್ದೇಶಕ ರಂಗನಾಥ, ಬೀದರ REC,CSB-CSR&TI ವಿಜ್ಞಾನಿ ಡಾ. ಶ್ರೀನಿವಾಸ್.ಕೆ, ಜಿಲ್ಲಾ ಆರೋಗ್ಯಾಧಿಕಾರಿ ಡಾ|| ಶರಣಬಸಪ್ಪಾ ಕ್ಯಾತನಾಳ, ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ವಿಕಾಸ ಸಜ್ಜನ, ಕಲಬುರಗಿ ವಿಭಾಗ ರೇಷ್ಮೆ ಸಹಾಯಕ ನಿರ್ದೇಶಕ

ಅನಿಲ ಎಸ್.ವಾಡಿ, ಗೂಡಿನ ನಂತರ ಚಟುವಟಿಕೆ ಜೇವರ್ಗಿ, 500 ಜನರೇಷ್ಮೆ ಬೆಳೆಗಾರರು, ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರದ ಮಾಲೀಕರು, ರೀಲಿಂಗ್ ತರಬೇತಿ ಪಡೆದ ನವ ಉದ್ಯಮಿಗಳು, ಕಲಬುರಗಿ ಹಾಗೂ ಬೀದರ್ ಜಿಲ್ಲೆ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿಜ್ಞಾನಿ ಮಂಜುನಾಥ ಆರ್.ಎನ್. ಅವರು ಸ್ವಾಗತಿಸಿದರು. ಕಲಬುರಗಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿ ವೀಣಾ ಹಾಗೂ ಅಣವೀರಪ್ಪ ಅವರು ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಮಹೇಶ್ವರಿ .ವಿ. ಸಜ್ಜನ ವಂದಿಸಿದರು.

ಹಳೆ ಮಲ್ಲಾಪೂರ ಗ್ರಾಮದಲ್ಲಿರುವ ಮಲ್ಲಯ್ಯನ ಗುಡ್ಡದಲ್ಲಿ ಸಸಿ ನೆಡುವ ಕಾರ್ಯಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಚಾಲನೆ



ಬಾಗಲಕೋಟೆ,ಜ.29-

ತಾಲೂಕಿನ ಹಳೆ ಮಲ್ಲಾಪೂರ ಗ್ರಾಮದಲ್ಲಿರುವ ಮಲ್ಲಯ್ಯನ ಗುಡ್ಡದಲ್ಲಿ 2 ಸಾವಿರ ಸಸಿಗಳನ್ನು ನೆಡುವ ಕಾರ್ಯಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಬುಧವಾರ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಅರಣ್ಯ ಇಲಾಖೆ ಹಾಗೂ ನಾಗರಾಳ-ನಾಯನೇಗಲಿ ಇಐಡಿ ಪ್ಯಾರಿ ಇಂಡಿಯಾ ಲಿಮಿಟೆಡ್ ಸಹಯೋಗದಲ್ಲಿ ಹಮ್ಮಿಕೊಂಡ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಪರಿಸರ ಸಂರಕ್ಷಣೆ ಮಾಡುವ ಉದ್ದೇಶದಿಂದ ಮಲ್ಲಯ್ಯನ ಗುಡ್ಡದಲ್ಲಿ ವಿವಿಧ ಜಾತಿಯ ಒಟ್ಟು 2 ಸಾವಿರ ಸಸಿಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಗುಡ್ಡದ ಪ್ರದೇಶಗಳಲ್ಲಿ ಸಸಿ ನೆಡುವುದರಿಂದ ಮಣ್ಣು ಕೊಚ್ಚುವಿಕೆಯನ್ನು ತಡೆಯಬಹುದಾಗಿದೆ. ಜಲಸಂಪನ್ಮೂಲ ಸಂರಕ್ಷಣೆ ಹಾಗೂ ಹವಾಮಾನ ಸಮತೋಲನಕ್ಕೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಹಸಿರು ಪರಿಸರ ನಿರ್ಮಾಣದತ್ತ ಜಿಲ್ಲಾಡಳಿತ ಮುಂದಾಗಿದ್ದು, ಜಿಲ್ಲೆಯಲ್ಲಿರುವ ಪ್ರತಿಯೊಂದ ಶುಗರ್ಸ್ ಕಾರ್ಖಾನೆಗಳ ಸಿಎಸ್‌ಆರ್ ಅನುದಾನಡಿಯಲ್ಲಿ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ನಿಗಧಿಪಡಿಸಿದ ಸ್ಥಳಗಳಲ್ಲಿ ಗಿಡ, ಮರಗಳನ್ನು ಬೆಳೆಸಲು ಎಲ್ಲ ಕಾರ್ಖಾನೆಗಳಿಗೆ ತಿಳಿಸಲಾಗಿತ್ತು. ಅದರಂತೆ ನಾಗರಾಳ-ನಾಯನೇಗಲಿ ಇಐಡಿ ಪ್ಯಾರಿ ಶುಗರ್ಸ್ ಇಂಡಿಯಾ ಲಿಮಿಟೆಡ್‌ನವರು ಬಾಗ ಲಕೋಟೆ ತಾಲೂಕಿನ ಮಲ್ಲಯ್ಯನ ಗುಡ್ಡದಲ್ಲಿ ಸಸಿ ನೆಡುವ ಕಾರ್ಯಕ್ಕೆ ಮುಂದಾಗಿರುವುದು ಸಂತೋಷದ ವಿಷಯವಾಗಿದೆ ಎಂದರು.

ಇದೇ ರೀತಿಯ ಅರಣ್ಯ ಇಲಾಖೆ ಹಾಗೂ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಿಸುವ ಕಾರ್ಯ ಹಮ್ಮಿಕೊಳ್ಳಲಾಗಿದೆ. ಮೆಲ್‌ಬ್ರೋ ಶುಗರ್ಸ್‌ನವರಿಗೆ ಮುಚಖಂಡಿ ಕೆರೆ ಆವರಣ, ಬಾಡಗಂಡಿಯಲ್ಲಿರುವ ಬೀಳಗಿ ಶುಗರ್ಸ್‌ನವರಿಗೆ ಬಾಡಗಂಡಿ ಮತ್ತು ಚಿಕ್ಕಸಂಗಮ, ಜೆಮ್ಸ್ ಶುಗರ್ಸ್‌ದವರಿಗೆ ಸುನಗ ಮತ್ತು ವಾರಿ ಮಲ್ಲಯ್ಯನಗುಡ್ಡ, ಬಾದಾಮಿ ಶುಗರ್ಸ್‌ಗೆ ಬಾದಾಮಿ ಗುಹೆಯ ಹತ್ತಿರ, ಕೇದಾರನಾಥ ಶುಗರ್ಸ್‌ಗೆ ಲಿಂಗಾಪೂರದಲ್ಲಿ ಸಸಿ ನೆಡಲು ಸ್ಥಳ ಗುರುತಿಸಲಾಗಿದೆ ಎಂದು ತಿಳಿಸಿದರು.

ಕೇನ್ ಫವರ್ ಲಿಮಿಟೆಡ್‌ಗೆ ಕುಳಗೇರಿ ಕ್ರಾಸ್, ನಿರಾಣಿ ಶುಗರ್ಸ್‌ಗೆ ಮುಧೋಳ, ಇಂಡಿಯನ್ ಕೇನ್ ಪಾವರ್‌ಗೆ ಉತ್ತೂರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಮುದ್ದಾಪೂರ, ಜಮಖಂಡಿ ಶುಗರ್ಸ್‌ಗೆ ಸಾವಳಗಿ, ಖಾಜಿಬೀಳಗಿ, ಪ್ರಭುಲಿಂಗೇಶ್ವರ ಶುಗರ್ಸ್‌ಗೆ ಸಿದ್ದಾಪೂರ, ಕುಳಲಿ, ಗೋದಾವರಿ ಶುಗರ್ಸ್‌ಗೆ ತೇರದಾಳ ಮತ್ತು ಬೆಳಗಲಿ ಗುಡ್ಡ ಹಾಗೂ ಸಾಯಿಪ್ರೀಯಾ ಶುಗರ್ಸ್‌ಗೆ ಮರೆಗುಡ್ಡಿ ಗ್ರಾಮದಲ್ಲಿ ಸಸಿಗಳನ್ನು ನೆಡಲಿದ್ದಾರೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿ.ಪಂ ಸಿಇಓ ಅವರು ಮಲ್ಲಯ್ಯನ ಗುಡ್ಡದ ಹತ್ತಿರ ಆಲಮಟ್ಟಿ ಹಿನ್ನೀರು ಇರುವದರಿಂದ ಸುಂದರವಾದ ಗಾರ್ಡನ್ ಮಾಡಲು ಅವಕಾಶವಿದೆ. ಈ ಗುಡ್ಡದಲ್ಲಿ ಮಲ್ಲಿಕಾರ್ಜುನ ದೇವಸ್ಥಾನವಿದ್ದು, ಸುತ್ತಲೂ ಪರಿಸರ ಬೆಳೆಸಿ, ಹಸರೀಕರಣಕ್ಕಾಗಿ ಕ್ರಮಕೈಗೊಂಡರೆ ಸುಂದರವಾದ ವಾತಾವರಣ ಸೃಷ್ಠಿಯಾಗುತ್ತದೆ. ಇದರಿಂದ ಪ್ರವಾಸಿಗರನ್ನು ಆಕರ್ಷಿಸಬಹುದಾಗಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಮಲ್ಲಯ್ಯನ ಗುಡ್ಡದಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ತೆರಳಿ ದರ್ಶನ ಒಡೆಯಲಾಯಿತು. ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಅಹಿರೆ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ರೂಪಾ ಡಿ, ಎ.ಐ.ಡಿ ಪ್ಯಾರಿ ಇಂಡಿಯಾ ಲಿಮಿಟೆಡ್‌ನ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಸುತ್ತಮುತ್ತಲಿನ ಗ್ರಾಮ, ನಗರದ ಪ್ರಮುಖರಾದ ಮಲ್ಲಿಕಾರ್ಜುನ ಮೇಟಿ, ಶ್ರೀನಿವಾಸ ಬಳ್ಳಾರಿ, ನಾಗರಾಜ ಹದ್ಲಿ, ಡಾ.ಶೇಖರ ಮಾನೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಯಲ್ಹೇರಿ ಪ್ರೌಢಶಾಲೆಯಲ್ಲಿ ನಡೆದ ಮಕ್ಕಳ ಹಕ್ಕುಗಳ ರಕ್ಷಣೆ ಗ್ರಾಮ ಸಭೆ

ಮಕ್ಕಳ ಹಕ್ಕುಗಳ ರಕ್ಷಣೆ ಸಾಕಾರಗೊಳ್ಳಲು ಜಾಗೃತಿ ಮೂಡಿಸುವುದು ಅವಶ್ಯ



ಯಾದಗಿರಿ,ಜ.29-

ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಮನೆಯೇ ಮೊದಲ ಪಾಠಶಾಲೆ, ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ತಂದೆ ತಾಯಿಯರ ಪಾತ್ರ ಮೊದಲ, ನಂತರದ್ದು ಶಿಕ್ಷಕರದ್ದು, ಮಕ್ಕಳನ್ನು ಸಂರಕ್ಷಣೆ ಮಾಡಿ ಅವರ ಹಕ್ಕುಗಳನ್ನು ರಕ್ಷಿಸಿ ಸಮಾಜವನ್ನು ಗಟ್ಟಿಯಾಗಿ ಕಟ್ಟಬೇಕೆಂದರೆ, ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯ ಪ್ರತಿಯೊಂದು ಶಾಲೆಗಳಿಂದಲೇ ಪ್ರಾರಂಭವಾಗಬೇಕೆಂದು ಯಲ್ಹೇರಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀಮತಿ ನಾಗರತ್ನ ಹೇಳಿದರು.

ಸರಕಾರಿ ಪ್ರೌಢ ಶಾಲೆ ಯಲ್ಹೇರಿಯಲ್ಲಿ ಗ್ರಾಮ ಪಂಚಾಯತಿ ವತಿಯಿಂದ ಆಯೋಜಿಸಲಾದ ಮಕ್ಕಳ ಹಕ್ಕುಗಳ ರಕ್ಷಣೆ ಗ್ರಾಮ ಸಭೆ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಮಾತನಾಡಿದ ಅವರು ಪ್ರಸ್ತುತದಲ್ಲಿ ಮಕ್ಕಳು ಎದುರಿಸುವ ಸವಾಲುಗಳನ್ನು ನಾವು ಅರಿತುಕೊಳ್ಳಬೇಕು. ಅವರ ಮನಸ್ಥಿತಿಯನ್ನು ಅರಿತುಕೊಂಡು ಮಕ್ಕಳಿಗೆ ಬಲ ತುಂಬುವ ಕೆಲಸ ಆಗಬೇಕಾಗಿದೆ. ಮಕ್ಕಳು ಬಾಲ್ಯಾವಸ್ಥೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದರಿಸುತ್ತಿದ್ದು, ಅವರು ಸಮಸ್ಯೆಗಳಿಂದ ಹೊರಬರಲು ನಾವುಗಳು ನೈತಿಕವಾಗಿ ಅವರಿಗೆ ಬೆಂಬಲ ನೀಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಮಕ್ಕಳ ಮೇಲೆ ಆಗುತ್ತಿರುವ ಲೈಂಗಿಕ ದೌರ್ಜನ್ಯ, ಮಕ್ಕಳು ಮಾದಕ ವಸ್ತುಗಳ ವ್ಯಸನಿಗಳು ಆಗುತ್ತಿರುವುದು ಹಾಗೂ ಮಕ್ಕಳು ಕೆಟ್ಟ ಚಟಗಳಿಗೆ ಒಳಗಾಗುತ್ತಿರುವುದನ್ನು ತಡೆಗಟ್ಟಬೇಕು ಎಂದು ಹೇಳಿದರು.

ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಕೇವಲ ಶಾಲಾ ಶಿಕ್ಷಕರು ಹಾಗೂ ಅಧಿಕಾರಿಗಳ ಪಾತ್ರವಲ್ಲದೇ ಪೋಷಕರ ಪಾತ್ರವು ಸಹ ಪ್ರಮುಖವಾದುದು. ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವುದು ಮತ್ತು ಜಾಗೃತಿ ಮೂಡಿಸುವ ಕಾರ್ಯ ಪ್ರತಿಯೊಬ್ಬರದ್ದಾಗಿದೆ. ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಯ ಕೆಲಸಗಳು ಮನೆಯಿಂದ ಹಿಡಿದು ಶಾಲಾ ಹಂತದವರೆಗೆ ಆಗಬೇಕು. ಶಾಲಾ ಹಂತದಲ್ಲಿ ಮಕ್ಕಳ ಜೀವನದ ಪಾಠವು ಸಹ ಆಗಬೇಕು. ಮಕ್ಕಳ ಮುಂದಿನ ಭವಿಷ್ಯವನ್ನು ಶಾಲಾ ಹಂತದಲ್ಲಿಯೇ ನಿರ್ಧಾರವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಮಕ್ಕಳು ತಮ್ಮ ಮುಂದಿನ ಭವಿಷ್ಯವನ್ನು ಚೆನ್ನಾಗಿ ಆಗಬೇಕೆಂದರೆ. ತಮ್ಮ ಪಾಠದ ಜೊತೆಗೆ ಪರಿಶ್ರಮವು ಪ್ರಮುಖವಾದುದು ಎಂದು ಸರಕಾರಿ ಪ್ರೌಢ ಶಾಲೆ ಯಲ್ಹೇರಿಯ ಮುಖ್ಯ ಗುರುಗಳಾದ ಶ್ರೀ ಮೊಗಲಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹಗಳು ಹಾಗೂ ಪೋಕ್ಸೊ ಪ್ರಕರಣಗಳು ಹೆಚ್ಚಾಗಿ ಸಂಭವಿಸುತ್ತೀವೆ. ಇವುಗಳಿಂದ ಸ್ವಯಂ ಆಗಿ ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದರ ಕುರಿತು ಮಕ್ಕಳಲಿ ಅರಿವು ಮೂಡಿಸಬೇಕು ಹಾಗೂ ಬಾಲ್ಯ ವಿವಾಹಗಳ ಕಾನೂನುಗಳ ಬಗ್ಗೆ ಶಾಲೆಯಲ್ಲಿ ಮಕ್ಕಳಿಗೆ ತಿಳಿ ಹೇಳಬೇಕೆಂದು ಸಾಮಾಜಿಕ ಕಾರ್ಯಕರ್ತೆಯಾದ ಶ್ರೀಮತಿ ಮಂಜುಳಾ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು.

ಮಕ್ಕಳು ಎಂದರೆ ಎಲ್ಲರೂ ಒಂದೇ ಹೆಣ್ಣು ಗಂಡು ಎಂಬ ಬೇದ ಭಾವ ಮಾಡಬಾರದು, ಇಂದಿನ ಮಕ್ಕಳು ಮುಂದಿನ ನಾಗರೀಕರು ಹಾಗೂ ಇಂದಿನ ಮಕ್ಕಳೇ ಮುಂದೆ ದೇಶ ಕಟ್ಟುವ ಪ್ರಜೆಗಳಾಗುವಂತ ಗುಣ ಬೆಳೆಸಿಕೊಳ್ಳುವಂತೆ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಲಿಂಗ ತಜ್ಞರಾದ ಶ್ರೀಮತಿ ಬಸಲಿಂಗಮ್ಮ ಹೇಳಿದರು.

ಯಲ್ಹೇರಿ, ಜಿ.ಬಿ. ತಾಂಡಾ ಹಾಗೂ ನವಬುರ್ಜ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ಮಕ್ಕಳು, ಆರೋಗ್ಯ ಇಲಾಖೆಯ ಬುಗ್ಗಮ್ಮ, ಎಲ್ಲಾ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರು ಹಾಗೂ ಆಶಾ ಕಾರ್ಯಕರ್ತೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೊನೆಯಲ್ಲಿ ಶಾಲೆಯ ವಿದ್ಯಾರ್ಥಿಗಳು ವಂದನಾರ್ಪಣೆ ಮಾಡಿದರು.

ಲಿಂಗ ಅಸಮಾನತೆ ಹೋಗಲಾಡಿಸಲು ಹೆಣ್ಣಿಗೆ ಪ್ರೋತ್ಸಾಹಿಸೋಣ: ಡಿಹೆಚ್‌ಓ ಡಾ.ಯಲ್ಲಾ ರಮೇಶ್ ಬಾಬು



ಬಳ್ಳಾರಿ,ಜ.29-

ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ಹೆಣ್ಣಿಗೆ ಸಮಾನ ಅವಕಾಶ ಮತ್ತು ಪ್ರೋತ್ಸಾಹ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಮೊದಲ ಬಾರಿಗೆ 2008 ರಲ್ಲಿ ಆಚರಣೆ ಮಾಡಲಾಯಿತು. ಭಾರತೀಯ ಸಮಾಜದಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ಅಸಮಾನತೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಚರಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಮಹಿಳೆಯರಲ್ಲಿ ಶಿಕ್ಷಣದ ಮಹತ್ವ, ಆರೋಗ್ಯ ಮತ್ತು ಪ್ರಾಮುಖ್ಯತೆಯನ್ನು ಉತ್ತೇಜಿಸುವುದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ ಆಚರಣೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಲಿಂಗಾನುಪಾತ ಹೆಣ್ಣು ಮಕ್ಕಳ ಆರೋಗ್ಯಕರ ಮತ್ತು ಸುರಕ್ಷಿತ ವಾತಾವರಣ ನಿರ್ಮಿಸಿದ್ದು, ಹೆಣ್ಣು ಮಗವನ್ನು ಉಳಿಸುವುದು, ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರ ಕುರಿತು ಜಾಗೃತಿ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ.ವಿರೇಂದ್ರ ಕುಮಾರ್, ಡಿಎನ್‌ಓ ಗಿರೀಶ್, ಆರೋಗ್ಯ ನಿರೀಕ್ಷಣಾಧಿಕಾರಿ ವಿರುಪಾಕ್ಷಿ, ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗೋಪಾಲ್ ಕೆ.ಹೆಚ್., ತಿಪ್ಪೇಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ಫ್ರಾನ್ಸಿಸ್, ಮಹೇಶ್, ಬಿಪಿಎಮ್ ಮೇಘರಾಜ್, ಓಬಳರೆಡ್ಡಿ, ವೀರೇಶ್ ಸೇರಿದಂತೆ ಪ್ರಾಥಮಿಕ ಸುರಕ್ಷಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಆಶಾಕಾರ್ಯಕರ್ತೆಯರು ಸೇರಿದಂತೆ ಇತರರು ಹಾಜರಿದ್ದರು.

ವಿದೇಶಿ ಪ್ರವಾಸಿಗ ಅಸ್ವಸ್ಥ : ಮಾನವೀಯತೆ ಮೆರೆದ ಜಿಲ್ಲಾಡಳಿತ

ಬಾಗಲಕೋಟೆ,ಜ.29-

ಜಿಲ್ಲೆಯ ಪ್ರವಾಸಕ್ಕಾಗಿ ಆಗಮಿಸಿದ್ದ ವಿದೇಶಿ ಪ್ರವಾಸಿಗ ಬಿಒಬ್ಬನಿಗೆ ಪಾರ್ಶ್ವವಾಯು ಹೊಡೆದು ಅಸ್ವಸ್ಥಗೊಂಡ ಹಿನ್ನಲೆಯಲ್ಲಿ ಜಿಲ್ಲಾಡಳಿತದಿಂದ ತಕ್ಷಣ ಸ್ಪಂದನೆ ದೊರೆತಿದೆ. ಪ್ರವಾಸಿಗನ ಆರೋಗ್ಯ ಸ್ಥಿತಿಯನ್ನು ಗಮನಿಸಿದ ಅಧಿಕಾರಿಗಳು ತ್ವರಿತವಾಗಿ ಅವರನ್ನು ಬಾದಾಮಿ ತಾಲೂಕಾ ಆಸ್ಪತ್ರೆಗೆ ದಾಖಲಿಸಿ ಸೂಕ್ತ ಪ್ರಾಥಮಿಕ ವೈದ್ಯಕೀಯ ಚಿಕಿತ್ಸೆ ಒದಗಿಸಲಾಗಿದೆ.

ಬಾದಾಮಿಗೆ ಆಗಮಿಸಿದ ಫ್ರೇಂಚ ದೇಶದ ಇರಘಾಕ್ ಗೋಲ್ಡಬರ್ಗ ಎಂಬ ಪ್ರವಾಸಿಗನಿಗೆ ಪಾರ್ಶ್ವ ಹೊಡೆದು ಅಸ್ವಸ್ಥನಾದ ಹಿನ್ನಲೆಯಲ್ಲಿ ಸರಕಾರಿ ಆಸ್ಪತ್ರೆಗೆ ದಾಖಲಿಸಿದಾಗ ವೈದ್ಯರ ತಂಡ ಪ್ರವಾಸಿಗನ ಆರೋಗ್ಯವನ್ನು ಪರಿಶೀಲಿಸಿ, ಪ್ರಾಥಮಿಕ ಚಿಕಿತ್ಸೆ ನೀಡಿದ್ದಾರೆ. ಈ ವಿಷಯ ತಿಳಿದ ಜಿಲ್ಲಾಡಳಿತವು ಸೂಕ್ತ ಚಿಕಿತ್ಸೆಗಾಗಿ ಬಾಗಲಕೋಟೆಯ ಖಾಸಗಿ ಆಸ್ಪತ್ರೆಯೊಂದಕ್ಕೆ ಸ್ಥಳಾಂತರ ಮಾಡಿ, ಸಿಟಿ ಸ್ಕ್ಯಾನ್, ಎಂ.ಆರ್.ಐ ಸ್ಕಾನ್ ಮಾಡಿಸಲಾಗಿ ಸೂಕ್ತ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಿದೆ.



ಸದ್ಯ ವಿದೇಶಿ ಪ್ರವಾಸಿಗ ಇರಘಾಕ್ ಗೋಲ್ಡಬರ್ಗಗೆ ಸೂಕ್ತ ಚಿಕಿತ್ಸೆ ಪಡೆಯುತ್ತಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಡಿ.ಎನ್ ತಿಳಿಸಿದ್ದಾರೆ.

ಸದರಿ ಪ್ರವಾಸಿಗನನ್ನು 24 ಗಂಟೆಗಳ ಕಾಲ ಅಬ್ಜರವೇಶನ್‌ದಲ್ಲಿ ಇಡಲಾಗಿದೆ. ಪ್ರವಾಸಿಗನ ಬಗ್ಗೆ ವಿದೇಶಿ ರಾಯಬಾರಿ ಕಚೇರಿ ಬೆಂಗಳೂರಿಗೆ ಮಾಹಿತಿ ನೀಡಿರುವುದಾಗಿ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿಯವರು ಪ್ರವಾಸಿಗನಿಗೆ ಸೂಕ್ತ ಚಿಕಿತ್ಸೆ ಕೊಡಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.



3 ಕರ್ನಾಟಕ ಏರ್ ಸ್ಕ್ವಾಡ್ರನ್ ಎನ್‌ಸಿಸಿ ವತಿಯಿಂದ ಗಣರಾಜ್ಯೋತ್ಸವ ಆಚರಣೆ

ಬೀದರ, ಜ.29-

3 ಕರ್ನಾಟಕ ಏರ್ ಸ್ಕ್ವಾಡ್ರನ್ ಎನ್.ಸಿ.ಸಿ.ಬೀದರ ವತಿಯಿಂದ ಎನ್.ಸಿ.ಸಿ.ಘಟಕದ ಎನ್‌ಸಿಸಿ ಕೆಡೆಟಗಳು ಮತ್ತು ಎನ್‌ಸಿಸಿ ಸಿಬ್ಬಂದಿಯಿಂದ ಜನವರಿ.26 ರಂದು 77ನೇ ಗಣರಾಜ್ಯೋತ್ಸವವನ್ನು ಅತ್ಯಂತ ದೇಶಭಕ್ತಿ ಮತ್ತು ಉತ್ಸಾಹದಿಂದ ಆಚರಿಸಲಾಯಿತು.

ಎನ್‌ಸಿಸಿ ಅಧಿಕಾರಿಯಿಂದ ರಾಷ್ಟ್ರ ಧ್ವಜಾರೋಹಣದೊಂದಿಗೆ ಸಂಭ್ರಮಾಚರಣೆ ಪ್ರಾರಂಭವಾಯಿತು. ನಂತರ ರಾಷ್ಟ್ರಗೀತೆ ಮತ್ತು ಎನ್‌ಸಿಸಿ ಕೆಡೆಟ್‌ಗಳಿಂದ ವಂದನೆ ಸಲ್ಲಿಸಲಾಯಿತು. ಈ ಸಂದರ್ಭ ಕೆಡೆಟ್‌ಗಳು ಮತ್ತು ಸಿಬ್ಬಂದಿಗಳಲ್ಲಿ ಏಕತೆ, ಶಿಸ್ತು ಮತ್ತು ರಾಷ್ಟ್ರೀಯ ಹೆಮ್ಮೆಯ ಮನೋಭಾವವನ್ನು ಎತ್ತಿ ತೋರಿಸಿತು. ಧಜ್ವಾರೋಹಣ ಸಮಾರಂಭದ ನಂತರ, ಸಾರ್ವಜನಿಕರಲ್ಲಿ ದೇಶಭಕ್ತಿ ಮತ್ತು ರಾಷ್ಟ್ರೀಯ ಏಕೀಕರಣದ ಸಂದೇಶವನ್ನು ಹರಡಲು 100 ಅಡಿ ರಾಷ್ಟ್ರೀಯ ಧ್ವಜವನ್ನು ಹಿಡಿದು ಭವ್ಯವಾದ ತಿರಂಗಾ ರ್‍ಯಾಲಿಯನ್ನು ಆಯೋಜಿಸಿತು. ಎನ್‌ಸಿಸಿ ಘಟಕದಿಂದ ಆರಂಭವಾದ ರ್‍ಯಾಲಿಯು ಅಂಬೇಡ್ಕರ್ ವೃತ್ತ ಮೂಲಕ ನೆಹರು ಕ್ರೀಡಾಂಗಣದ ಮೂಲಕ ಮಡಿವಾಳ ವೃತ್ತದ ಮೂಲಕ ಸಾಗಿ ಮತ್ತೆ ಎನ್‌ಸಿಸಿ ಘಟಕಕ್ಕೆ ಆಗಮಿಸಿತು. ಇದೇ ಸಮಯದಲ್ಲಿ ಬೀದರ ನೆಹರು ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗಣರಾಜ್ಯೋತ್ಸವ ಪರೇಡ್‌ನಲ್ಲಿ 3 ಕರ್ನಾಟಕದಿಂದ ಹಿರಿಯ ಮತ್ತು ಕಿರಿಯ ವಿಭಾಗದಿಂದ ತಲಾ 21 ಕೆಡೆಟ್‌ಗಳನ್ನು ಒಳಗೊಂಡ ಎರಡು ತುಕಡಿಗಳು ಭಾಗವಹಿಸಿದ್ದವು.

3 ಕರ್ನಾಟಕ ಎನ್‌ಸಿಸಿ ತಂಡವು ಬೀದರ ಸಂಚಾರಿ ಪೊಲೀಸರ ಸಹಕಾರದೊಂದಿಗೆ ಕಾರ್ಯಕ್ರಮವನ್ನು ಆಯೋಜಿಸಿತು. ಕಾರ್ಯಕ್ರಮದಲ್ಲಿ 3 ಕರ್ನಾಟಕ ಎನ್‌ಸಿಸಿಯ ಗ್ರೂಪ್ ಕ್ಯಾಪ್ಟನ್ ವಿಎನ್‌ಎಲ್ ರೆಡ್ಡಿ, ಕಮಾಡಿಂಗ್ ಆಫೀಸರ್, ಜೂನಿಯರ್ ವಾರಂಟ್ ಆಫೀಸರ್, ಜೂನಿಯರ್ ವಾರಂಟ್ ಆಫೀಸ್ ಪ್ರದೀಪ ಸಿಂಗ್ ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ಡಿಕೆಶಿ ಸಿಎಂ ಸ್ಥಾನಕ್ಕೆ ಹೋಗಲು ಭಗವಂತ ಅವಕಾಶ ಮಾಡಿಕೊಡಬಾರದು;ಜನಾರ್ದನ ರೆಡ್ಡಿ

ಬೇರೆ. ದೇವರಿಚ್ಚೆ ಇತ್ತೇನೋ ನಾನು ಜೈಲಿಗೆ ಹೋಗಿ ಬಂದೆ. ಬಳ್ಳಾರಿಯಲ್ಲಿ ಕಾನೂನು ಕಾಪಾಡಿ, ನಗರಕ್ಕೆ ಒಳ್ಳೆಯ ಅಧಿಕಾರಿಗಳನ್ನು ಹಾಕಿ. ಅಧಿಕಾರ ಇರಲಿ ಬಿಡಲಿ ಬಳ್ಳಾರಿಯಲ್ಲಿ ಶಾಂತಿ ನೆಲೆಸಬೇಕು. ಬಳ್ಳಾರಿಯಲ್ಲಿ ಶಾಸಕರು ಅಭಿವೃದ್ಧಿ ಮಾಡಲಿ, ತಮಗೆ ಸಿಕ್ಕ ಅವಕಾಶ ಬಳಸಿಕೊಳ್ಳಲಿ. ಗ್ಯಾಂಗ್ ಇಟ್ಕೊಂಡು ಗನ್, ರೈಫಲ್ ಇಟ್ಕೊಂಡು ಓಡಾಡೋದು ಸರಿಯಲ್ಲ ಎಂದು ವಾಗ್ದಾಳಿ ನಡೆಸಿದರು.

ಕಿರೀಟ ಮುಡಿಗೇರಿಸಿಕೊಂಡ ಬೆಳಗಾವಿ ಜಿಲ್ಲೆಯ ಕುವರ ಪ್ರಶಾಂತ ಕನ್ನೂರಕರ

ಕೆ.ಜಿ. ಮತ್ತು 80+ ಕೆ.ಜಿ ಸೇರಿದಂತೆ ಒಟ್ಟು ಏಳು

ವಿಭಾಗದಲ್ಲಿ ಸ್ಪರ್ಧೆ ನಡೆಯಿತು.

ಪ್ರತಿ ವಿಭಾಗದಲ್ಲಿ ವಿಜೇತರಾದ ತಲಾ ಐದು ಸ್ಪರ್ಧಾಳುಗಳಿಗೆ ಕ್ರಮವಾಗಿ 15,000, 5000, 4000, 3000 ಮತ್ತು 2000 ರೂ ನಗದು ಬಹುಮಾನ, ಪ್ರಮಾಣ ಪತ್ರ ಮತ್ತು ಮೆಡಲ್ ನೀಡಿ ಸತ್ಕರಿಸಲಾಯಿತು.

ಪೂರ್ಣಪಂದ್ಯ ವೀಕ್ಷಿಸಿದ ಜಿಲ್ಲಾಧಿಕಾರಿಗಳು, ಜಿಪಂ ಸಿಇಓ: ದೇಹದಾರ್ಢ್ಯ ಸ್ಪರ್ಧೆಯು ಜನವರಿ 28ರ ರಾತ್ರಿ 7.30ಕ್ಕೆ ಆರಂಭವಾಯಿತು.

ಜಿಪ ಸಿಇಓ ಮಹಾನಗರ ಪಾಲಿಕೆಯ ಆಯುಕ್ತರು, ಅಪರ ಜಿಲ್ಲಾಧಿಕಾರಿಗಳು ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು, ಪಂದ್ಯ ವೀಕ್ಷಕರ ಸಾಲಿನಲ್ಲಿ ಕುಳಿತು ಪಂದ್ಯ ಆರಂಭದಿದ ರಾತ್ರಿ 10.30ರವರೆಗೆ ಸತತ 3 ಗಂಟೆ ಸಮಯ ದೇಹದಾರ್ಢ್ಯ ಸ್ಪರ್ಧೆಯ ವೀಕ್ಷಣೆ ನಡೆಸಿ ಸ್ಪರ್ಧಾಳುಗಳಿಗೆ ಹುರಿದುಂಬಿಸಿದರು.

ರಾಯಚೂರು ಉತ್ಸ ವದ ಬಗ್ಗೆ ಸಲಹೆ ಕೇಳಲು ಜಿಲ್ಲಾಡಳಿತದಿಂದ ನಡೆಸಿದ ಸಂಘ ಸಂಸ್ಥೆಗಳ, ಗಣ್ಯರ, ನಾಗರಿಕರ, ಬುದ್ದಿ ಜೀವಿಗಳ, ಸಾಹಿತಿಗಳ, ಕಲಾವಿದರ ಮೊದಲ ಸಭೆಯಲ್ಲಿ ಕೇಳಿ ಬಂದ ಸಲಹೆಯಂತೆ ನಾವು ರಾಜ್ಯಮಟ್ಟದ ದೇಹದಾರ್ಢ್ಯ ಸ್ಪರ್ಧೆ ಆಯೋಜನೆ ಮಾಡಿ ಕ್ರೀಡಾಸಕ್ತರಿಗೆ ಸ್ಪೂರ್ತಿ ನೀಡಿದ್ದೇವೆ ಎಂದು ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾಧಿಕಾರಿಗಳು ಅಭಿಪ್ರಾಯ ಹಂಚಿಕೊಡರು.

ಸಮಾರಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಡಿವೈಎಸ್ಪಿ ಶಾಂತವೀರ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ, ತಹಸೀಲ್ದಾರ ಸುರೇಶ ವರ್ಮಾ, ಅಮರೇಶ ಬಿರಾದಾರ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾವಂತಗೇರಿ, ಡಿಎಚ್ ಒ ಡಾ.ಸುರೇಂದ್ರ ಬಾಬು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ವೀರೇಶ ನಾಯಕ ಸೇರಿದಂತೆ ಇನ್ನಿತರರು ಇದ್ದರು.

ಜಹೀರಾಬಾದ್ ಬಡಾವಣೆಗಳಲ್ಲಿ ಜನಸಂಪರ್ಕ ಸಭೆ

ಮಾಡಿ ಮಾಡಬೇಕು ಎಂದು ಮಾತನಾಡಿದರು.

ಡಿವೈಎಸ್ಪಿ ಶಾಂತವೀರ್ ರವರು ಮಾತನಾಡಿ ಜಲ್ದಾರ್ಗ ಯಂಕಪ್ಪ, ಮೇಕಾ ರವರಿಗೆ ಹಾಗೂ ತನ್ನ ಅತ್ಮೀಯರಿಗೆ ಸ್ವಾಗತ ಕೋರುತ್ತಾ ಮಾತನಾ ಡುತ್ತಾ ಗಲಾಟೆ, ಹಲ್ಲೆ, ಜಗಳ ಆಗುವ ವಿಚಾರಗಳು ಎಂದು ಮನೆಯಲ್ಲಿ ಪಾಲಕರ ತೊಂದರೆಗಳು ಬೇಜವಾಬ್ದಾರಿ ಹಾಗೂ ತಪ್ಪುಗಳು ಹಿಂದೆ ಚಿಕ್ಕಪುಟ್ಟ ತಪ್ಪುಗಳಿಂದ ಪಾಲಕರ ಸಹಕಾರ ಮಕ್ಕಳ ಗೆಳೆಯರ ಬಳಗ ಹಾಗೂ ಮಕ್ಕಳ ಬಗ್ಗೆ ಕಾಳಜಿ ವಹಿಸಿದೆ ವಿಚಾರಿಸದೆ ಇರುವುದು, ಶಿಕ್ಷಣ ಕೊಡಿಸದೆ ಇರುವುದು, ಮಕ್ಕಳಿಗೆ ಸಂಸ್ಕೃತಿ ಹಾಗೂ ಸದ್ಗುಣಗಳನ್ನು ಬೆಳಿಸಿ ಎಂದು ತಿಳಿಸಿದರು.

ರಾತ್ರಿ ಹೊರಗಡೆ ಹುಟ್ಟುಹಬ್ಬ, ಕುಡಿಯೊದು, ಅವಾಚ್ಯ ವರ್ತನೆ, ನುಡಿಗಳು ಹಾಗೂ ನಿಮ್ಮ ಪಕ್ಕದಲ್ಲಿ ಹಾಗುವ ತಪ್ಪುಗಳನ್ನು ಮಾಡುವವರ ಬಗ್ಗೆ ಮಾಹಿತಿ ನೀಡಿ ಎಂದು ಹೇಳಿದರು. ಹಾಗೆ ಸೈಬರ್ ಕ್ರೈಮ್ ಬಗ್ಗೆ ಮಾಹಿತಿ ನೀಡಿ ಮಾತನಾಡಿದರು.

ಪಿಎಸ್ಐ ಬಸವರಾಜ್ ರವರು ತಮ್ಮ ತಮ್ಮ ತಮ್ಮ ಮಕ್ಕಳ ಬಗ್ಗೆ ಎಚ್ಚರ ವಹಿಸಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಡಾವಣೆಯ ಹಿರಿಯರು, ಮಹಿಳೆಯರು, ಮಹನಿಯರು, ಯುವಕ-ಯುವತಿಯರು ಭಾಗವಹಿಸಿದ್ದರು.

ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರಕ್ಕೆ ಜಿ.ಪಂ ಸಿಇಓ ಚಾಲನೆ ಗ್ರಾ.ಪಂಚಾಯತ ಮಟ್ಟದಿಂದ ಸರಿಯಾದ ಮಾಹಿತಿ ನೀಡಿ: ಈಶ್ವರ ಕುಮಾರ್

ಸಹ ಅಭಿವೃದ್ಧಿ ದೃಷ್ಟಿಯಿಂದ ಮುಖ್ಯವೆನಿಸಿವೆ. ಆದ್ಯಾಗಿಯೂ ಲಿಂಗ ತಾರತಮ್ಯ, ನಿರುದ್ಯೋಗ, ಬಡತನ ಜನರನ್ನು ಕಾಡುತ್ತಿದೆ. ಈ ವರದಿ ಸಲ್ಲಿಸುವ ಕುರಿತು ಜಿಲ್ಲಾ ಮಟ್ಟದಲ್ಲಿಯೂ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತ ಸಿಇಒ ನೇತೃತ್ವದಲ್ಲಿ ಸಮಿತಿ ಸಹ ರಚಿಸಲಾಗಿದೆ. ಇದರಿಂದ ಅಭಿವೃದ್ಧಿ ಪೂರಕವಾದ ಅಂಶಗಳು ಬೆಳಕಿಗೆ ಬರುತ್ತದೆ ಎಂದರು.

ವಸ್ತುಸ್ಥಿತಿ ವರದಿಗೆ ಸಹಕಾರ ಅಗತ್ಯ: ಜಿಲ್ಲಾ ಮಾನವ ಅಭಿವೃದ್ಧಿ ವರದಿಗೆ ಅತ್ಯಂತ ಮಹತ್ವವಾದ ಮೌಲ್ಯವಿದೆ. ಇದು ದೀರ್ಘ, ಆರೋಗ್ಯಕರ ಮತ್ತು ಸೃಜನಾತ್ಮಕ ಜೀವನ ನಡೆಸಲು, ಶಿಕ್ಷಣ ಪಡೆಯಲು ಮತ್ತು ಯೋಗ್ಯ ಜೀವನ ಮಟ್ಟಕ್ಕೆ ಬೇಕಾದ ಸಂಪನ್ಮೂಲಗಳನ್ನು ಹೊಂದಲು ಅವಕಾಶ ನೀಡುತ್ತದೆ. ಹಾಗಾಗಿ ಅಧಿಕಾರಿಗಳು ತಾವು ತಯಾರಿಸುವ ವರದಿಯಿಂದ ಜಿಲ್ಲೆಯ ಅಭಿವೃದ್ಧಿ ಅವಲಂಬಿತವಾಗಿರುತ್ತದೆ. ವಸ್ತುಸ್ಥಿತಿ ವರದಿ ತಯಾರಿಕೆಗೆ ಅಧಿಕಾರಿಗಳ ಸಹಕಾರ ಅಗತ್ಯವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಕರ್ನಾಟಕ ವಿಶ್ವವಿದ್ಯಾಲಯದ ಲೀಡ್ ಏಜೆನ್ಸಿ ಡಾ.ಜಗದ್ದೀಶ್, ಡಾ.ಕುಮಾರ್, ಜಿಲ್ಲಾ ಪಂಚಾಯತ್ ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನಾಧಿಕಾರಿ ರಾಘವೇಂದ್ರ, ಕುಲಕರ್ಣಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ಲಕ್ಷ್ಮಣ ಲೇಔಟ್ ನಿವಾಸಿಯಾದ ಅಲ್ಬರ್ಟ ಜಾನ್ ಕಾಣೆ: ಪತ್ತೆಗೆ ನೇತಾಜಿ ನಗರ ಪೊಲೀಸರ ಮನವಿ

ರಾಯಚೂರು ನಗರ ಪೊಲೀಸ್ ಕಂಟ್ರೋಲ್ ರೂಂ ದೂರವಾಣಿ ಸಂ: 08532-235635, 08532-235100, 9480803800 ಅಥವಾ ಪಿ.ಎಸ್.ಐ ಮೊಬೈಲ್ ಸಂಖ್ಯೆ: 9480803846, ನೇತಾಜಿ ನಗರ ಠಾಣೆ ಹಾಗೂ ಸಿ.ಪಿ.ಐ ಪಶ್ಚಿಮ ವೃತ್ತ ರಾಯಚೂರು ಮೊಬೈಲ್ ಸಂಖ್ಯೆ: 9480803831ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂದಾ ಕಟ್ಟಿಮನಿ ಬಳಗದ ವತಿಯಿಂದ 500 ಜನರಿಗೆ ಲ್ಯಾಂಡ್ ಲಾರ್ಡ್ ಚಿತ್ರ ವೀಕ್ಷಣೆಗೆ ಉಚಿತ ಪ್ರವೇಶ

ಅವಕಾಶ ಮಾಡಿಕೊಟ್ಟಂತ ನಂದ ಕಟ್ಟಿಮನಿ ಬಳಗಕ್ಕೆ ಧನ್ಯವಾದಗಳನ್ನು ತಿಳಿಸುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ಅಂಬೇಡ್ಕರ ಸೇನೆಯ ಜಿಲ್ಲಾಧ್ಯಕ್ಷ ವಿಶ್ವನಾಥ್ ಪಟ್ಟಿ ಮಾತನಾಡಿ, ಲ್ಯಾಂಡ್ ಲಾರ್ಡ್ ಚಲನಚಿತ್ರದಲ್ಲಿ ಸವಿಧಾನ ಆಶಯಗಳು ದುಡಿಯುವ ಜನರ ಪರವಾದ ಚಿತ್ರವಾಗಿದೆ. ಈ ಚಿತ್ರವನ್ನು ಪ್ರತಿಯೊಬ್ಬರೂ ನೋಡಲೇಬೇಕು. ದುನಿಯಾ ವಿಜಯ ಅವರ ಸಿನಿಮಾಗಳನ್ನು ನೋಡಿದ್ದೇವೆ. ಅವರ ನಟನೆ ಅದ್ಬುತವಾಗಿ ಮಾಡಿದ್ದಾರೆ. ಎಲ್ಲರು ತಪ್ಪದೇ ಈ ಚಿತ್ರವನ್ನು ನೋಡಿ ಗೆಲ್ಲಿಸಬೇಕು ಎಂದ ಅವರು, ಈ ಚಿತ್ರದಲ್ಲಿ ಅದ್ಬುತವಾದ ಕಥೆ ಸಂಭಾಷಣೆ ಸಮಾಜಕ್ಕೆ ಒಳ್ಳೆ ಸಂದೇಶ ಸವಿಧಾನವನ್ನು ಅಳವಡಿಸಿಕೊಳ್ಳಬೇಕು ಅನ್ನೋ ಸಂದೇಶ ಕಾನೂನು ಸಮಾನತೆ ಸಾರ ಸಂದೇಶವಿದೆ ಎಂದರು.

ಈ ಸಂಧರ್ಭದಲ್ಲಿ ಸೈಯದ್ ಮಸೂಮ್ , ಅನಿಲ್ ಕುಮಾರ ಕಟ್ಟಿಮನಿ, ಸಾಧಿಕ್ ಖಾನ್ ಸೇರಿದಂತೆ ವಿವಿಧ ಸಂಘಟನೆಯ ಮುಖಂಡರು ಇದ್ದರು.

ಫೆ.06ರಂದು ಶ್ವಾನಗಳ ಪ್ರದರ್ಶನ

ರಾಯಚೂರು ಜನವರಿ 29

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರಾಣಿದಯಾ ಸಂಘ,ಕೃ.ವಿ.ವಿ, ಪಶುಪಾಲನಾ ಇಲಾಖೆ ಹಾಗೂ ಕರ್ನಾಟಕ ಪಶುವೈದ್ಯಕೀಯ ಸಂಘ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನಲ್ಲಿ ಫೆ.06ರಂದು ನಗರದ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ ಆವರಣದಲ್ಲಿ ಶ್ವಾನಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಎಲ್ಲಾ ನಾಗರಿಕರು ಹಾಗೂ ಶ್ವಾನ ಪ್ರಿಯರು ಭಾಗವಹಿಸುವಂತೆ ಕೋರಲಾಗಿದೆ.



ಈ ಪ್ರದರ್ಶನದಲ್ಲಿ ಭಾಗವಹಿಸಿದ ಎಲ್ಲಾ ಶ್ವಾನಗಳಿಗೆ ಉಚಿತವಾಗಿ ರೇಬೀಸ್ ಲಸಿಕೆಯನ್ನು ಹಾಕಲಾಗುವುದು ಎಂದು ಪಶುಪಾಲನಾ ಇಲಾಖೆ ಇಲಾಖೆಯ ಉಪನಿರ್ದೇಶಕರಾದ ಡಾ.ಪೋಮಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಂಧನೂರಿನಲ್ಲಿ ಕೈಗಾರಿಕೋದ್ಯಮಿಗಳಿಗೆ ಅರಿವು

ರಾಯಚೂರು ಜನವರಿ 29

ಇಲ್ಲಿನ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ 2025-26ನೇ ಸಾಲಿನ ರಾಂಪ್ ಯೋಜನೆಯಡಿ ಯಲ್ಲಿ ಇಆ ಐಇಂಓ ಟಿಜಡಿ ಖಿಂಙ ಯೋಜನೆ ಕುರಿತು ಕೆಎಸ್ಎಮ್ಸಿಎ ಬೆಂಗಳೂರು ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಸಿಂಧನೂರಿನ ವಿನಯ್ ರೆಸಿಡೆನ್ಸಿ ಹೋಟೆಲ್‌ನಲ್ಲಿ ಜನವರಿ 31ರ ಬೆಳಿಗ್ಗೆ 10.30ಕ್ಕೆ ಕೈಗಾರಿಕೋದ್ಯಮಿಗಳಿಗೆ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿವಿಧ ಕಾಮಗಾರಿಗಳಿಗೆ ಶಾಸಕ ಜೆ.ಟಿ.ಪಾಟೀಲ ಭೂಮಿ ಪೂಜೆ



ಬಾಗಲಕೋಟೆ ,ಜ.27-

ತಾಲೂಕಿನ ಯಡಹಳ್ಳಿ ಗ್ರಾಮದಲ್ಲಿ 15ನೇ ಹಣಕಾಸು ಯೋಜನೆಯಡಿ 65 ಲಕ್ಷ ರೂ.ಗಳ ಅನುದಾನದಲ್ಲಿ ನಿರ್ಮಿಸಲಾಗುತ್ತಿರು ಆಯುಷ್ಮಾನ ಆರೋಗ್ಯ ಮಂದಿರ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ ಭೂಮಿ ಪೂಜೆ ನೆರವೇರಿಸಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡ ಆಯುಷ್ಮಾನ ಆರೋಗ್ಯ ಮಂದಿರ ಕಟ್ಟಡ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸರಕಾರ ಸದಾ ಸಿದ್ದವಿದ್ದು, ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಭದ್ರಬುನಾದಿಯೊಂದಿಗೆ ಸುಸಜ್ಜಿತ ಕಟ್ಟಡ ನಿರ್ಮಿಸಬೇಕೆಂದು ತಿಳಿಸಿದರು.

ಗ್ರಾಮಸ್ಥರು ತಮ್ಮ ಗ್ರಾಮಗಳಿಗೆ ಮಂಜೂರಾದ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಿ, ಇದು ನಮ್ಮ ಕೆಲಸ ನಮ್ಮ ಗ್ರಾಮದ ಕೆಲಸ ಎಂಬ ಅಭಿಮಾನದಿಂದ ಮಂಜೂರಾದ ಕಾರ್ಯಕ್ರಮಗಳನ್ನು ಮಾಡಿಸಿಕೊಳ್ಳಬೇಕು. ಗುತ್ತಿಗೆದಾರರು ತಮಗೆ ನಿಗದಿಪಡಿಸಿದ ಸಮಯದಲ್ಲಿ ಕಾರ್ಯ ಮುಗಿಸಬೇಕು. ಸಿಮೆಂಟ್ ಕಾರ್ಯವಾಗಿರುವುದರಿಂದ ಕ್ಯೂರಿಂಗ್ ಕಡೆ ಹೆಚ್ಚಿನ ಗಮನಹರಿಸಿ ಕಟ್ಟಡ ಸುಭದ್ರವಾಗುವಂತೆ ನೋಡಿಕೊಳ್ಳಬೇಕು ಎಂದರು.

65 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಆಸ್ಪತ್ರೆಗೆ ತಳಮಹಡಿಯಲ್ಲಿ ಪ್ರಯೋಗಶಾಲೆ ಪರೀಕ್ಷಾ ಕೊಠಡಿ ರೋಗಿಗಳ ವಿಶ್ರಾಂತ ಕೊಟಡಿಸೇರಿದಂತೆ ಮೇಲ್ಮಹಡಿಯಲ್ಲಿ ಸುಸಜ್ಜಿತವಾದ ಎರಡು ಬೆಡ್ರೂಮ್ ಹೊಂದಿರುವ ಕಟ್ಟಡಗಳು ಇದರೊಳಗಿದ್ದು, ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಇಲ್ಲಿಯೇ ಇರಲು ಅವಕಾಶ ಮಾಡಿಕೊಡಲಾಗಿದೆ ಎಂದರು.

ಸೋರಕೊಪ್ಪ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಗ್ರಾಮದ ಜನರಿಗೆ ಈ ಆಸ್ಪತ್ರೆ ಅನುಕೂಲವಾಗಲಿದ್ದು ಇದರಿಂದ ಸಮಯ ಹಾಗೂ ಹಣ ಉಳಿತಾಯದ ಜೊತೆಗೆ ನಮ್ಮೂರ ಆಸ್ಪತ್ರೆ ಎಂಬ ಅಭಿಮಾನ ಮೂಡುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಮಾಲಾ ನಾಲತ್ವಾಡ ಮಾಜಿ ಅಧ್ಯಕ್ಷ ರುದ್ರಪ್ಪ ಮೇಣಸಗಿ ಹುಚ್ಚಪ್ಪ ನೀಲಣ್ಣವರ, ಸಂಗಣ್ಣ ನಾಲತ್ವಾಡ, ಶಂಕ್ರಪ್ಪ ದಾಳಿ ಹನುಮಂತ ಕೆಂಪಣ್ಣವರ, ವಿಠ್ಠಲ ಪೂಜಾರಿ, ಪರಶುರಾಮ್ ಮಾದರ್, ವೆಂಕಟೇಶ್ ಮಜ್ಜಿಗಿ ಹಾಗೂ ಯಡಹಳ್ಳಿ ಪ್ರೌಢಶಾಲಾ ಮುಖ್ಯ ಗುರುಗಳಾದ ಕೆ.ಎಚ್.ಮುಜಾವರ್, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಅಂಗನವಾಡಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಫೆ.1 ರಂದು ಮಡಿವಾಳ ಮಾಚಿದೇವ ಜಯಂತಿ ವಿಜೃಂಭಣೆಯಿಂದ ಆಚರಿಸಲು ನಿರ್ಧಾರ



ಕಲಬುರಗಿ,ಜ.29-

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶ್ರೀ ಮಡಿವಾಳ ಮಾಚಿದೇವ ಜಯಂತಿಯನ್ನು ಫೆಬ್ರವರಿ 01 ರಂದು ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಧಿಕಾರಿ ಕಚೇರಿಯ ಸಹಾಯಕರಾದ ಶಿವಪ್ರಭು ಹಿರೇಮಠ ಅವರ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಧರಿಸಲಾಯಿತು.

ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೇ ಫೆಬ್ರವರಿ 01 ರಂದು ರವಿವಾರ ಮಧ್ಯಾಹ್ನ 1.30 ಗಂಟೆಗೆ ಕಲಬುರಗಿ ನಗರದ ಡಾ. ಎಸ್.ಎಂ ಪಂಡಿತ ರಂಗಮಂದಿರದಲ್ಲಿ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರು ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ರವಿಕುಮಾರ ಶಹಾಪೂರಕರ, ಪಿ.ಡಿ.ಎ. ಇಂಜಿನಿಯರಿಂಗ ಕಾಲೇಜಿನ ಪ್ರಾಧ್ಯಾಪಕರಾದ ಸಂಜಯ ಮಹಾಕಾಳ ಉಪನ್ಯಾಸಕರಾಗಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಶಿವರಾಜ ಅಂಡಿಗಿ ಕಾರ್ಯಕ್ರಮದ ನಿರೂಪಕರನ್ನಾಗಿ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ಜಗದೀಶ್ವರಿ ನಾಶಿ ಅವರು ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರುಗಳಾದ ಶಿವಪುತ್ರ ಮಲ್ಲಾಬಾದಕರ, ಸಿದ್ದು ಇಂಚಗೇರಿ, ಶಾಂತು ಕಣ್ಣೂರ, ಪುಂಡಲಿಕ, ಬಸವರಾಜ, ವಿಠ್ಠಲ, ನಾಗೇಶ ಇತರರು ಉಪಸ್ಥಿತರಿದ್ದರು.

ಭಾರತ ಬಲಿಷ್ಠ ಪ್ರಜಾ ಪ್ರಭುತ್ವ ರಾಷ್ಟ್ರ-ಪ್ರೊ. ಬಿ.ಎಸ್.ಬಿರಾದಾರ

ಬೀದರ, ಜ.29-

ಜಗತ್ತಿನ ಅತ್ಯಧಿಕ ಜನಸಂಖ್ಯೆವುಳ್ಳ ಭಾರತವು ಬಲಿಷ್ಠ ಪ್ರಜಾ ಪ್ರಭುತ್ವ ಹೊಂದಿದ ದೇಶವಾಗಿದೆ ಎಂದು ಬೀದರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿಎಸ್.ಬಿರಾದಾರ ಹೇಳಿದರು.

ಅವರು ಸೋಮವಾರ ಬೀದರ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ 77ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೆರಿಸಿ ಮಾತಾನಾಡುತ್ತಿದ್ದರು.

ಒಂದು ದೇಶದ ಶಕ್ತಿ ಸಂಪತ್ತು ಎಂದರೆ ಆ ದೇಶದ ಪ್ರತಿಭಾ ಶಕ್ತಿ ಹಾಗೂ ಪಡೆದಿರುವ ಪಟೆಂಟ್ ಗಳ ಆಧಾರದಿಂದ ಅಳೆಯಲಾಗುತ್ತದೆ. ಒಂದು ದೇಶದ ಶಕ್ತಿಯನ್ನು ಅಳೆಯಬೇಕಾದರೆ ಆ ದೇಶದ



ಬಹುತೀಕ ಸಂಪತ್ತಿಗಿಂಗ ಜ್ಞಾನ ಸಂಪತ್ತು ಮುಖ್ಯವಾಗಿರುತ್ತದೆ ಬೀದರ ವಿಶ್ವವಿದ್ಯಾಲವಯ ನೂತನ ವಿಶ್ವವಿದ್ಯಾಲಯವಾಗಿದ್ದರು ಸಹ ಕ್ರಿಯಾಶಿಲತೆಯಿಂದ ಅಭಿವೃದ್ಧಿಯಿಂದ ಮಕ್ಕಳ ಭವಿಷ್ಯವನ್ನು ರೂಪಿಸುತ್ತಿದೆ. ಬೀದರ ವಿಶ್ವವಿದ್ಯಾಲಯವು ಮುಂದಿನ ದಿನಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಕಟ್ಟಡಗಳು ಆಟದ ಮೈದಾನ ಮುಂತಾದ ಅಭಿವೃದ್ಧಿ ಕೆಲಸಗಳು ಮುಂದಿನ ದಿನಗಳಲ್ಲಿ ನಡೆಯುತ್ತವೆ ಎಂದರು.

ಮುಂಬರುವ ದಿನಗಳಲ್ಲಿ ಬೀದರ ವಿಶ್ವವಿದ್ಯಾಲಯ 05 ಜನ ವಿದ್ಯಾರ್ಥಿಗಳನ್ನು ಅವರ ಪ್ರತಿಭಾವಂತಿಕೆ ಆಧಾರದಿಂದ ಹೆಚ್ಚಿನ ಜ್ಞಾನರ್ಜನೆಗಾಗಿ ಯು.ಕೆ ದೇಶಕ್ಕೆ ಕಳುಹಿಸಲಾಗುವುದು. ಹೆಮ್ಮೆಯ ವಿಷಯವೆನೆಂದರೆ ಬೀದರ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಗಣೇಶ ಎಂಬ ವಿದ್ಯಾರ್ಥಿಯು ಈ ಸಲದ ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡಿದ್ದಾರೆ ಇಂದಿನ ಯುವಕರು ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡಿ ವಿಶ್ವವಿದ್ಯಾಲಯಕ್ಕೆ ನಾಡಿಗೆ ಕೀರ್ತಿ ತರಬೇಕಾಗಿದೆ ಎಂದು ಕುಲಪತಿಗಳ ನುಡಿದರು.

ಈ ಸಂದರ್ಭದಲ್ಲಿ ಬೀದರ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ನಾಗಭೂಷಣ ಎಮ್. ಕಮಠಾಣೆ, ಶಿವನಾಥ ಪಾಟೀಲ್, ಅಬ್ದುಲ್ ಸತ್ತಾರ, ವೈಷ್ಣವಿ ಪಾಟೀಲ್, ಡಾ. ರವೀಂದ್ರನಾಥ ವಿ. ಗಬಾಡಿ, ಶಿಕ್ಷಕ-ಶಿಕ್ಷಕೇತರ ಸಿಬ್ಬಂಧಿ ವರ್ಗದವರು ಸೇರಿದಂತೆ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು ಕಾರ್ಯಕ್ರಮವನ್ನು ಡಾ. ರಾಮಚಂದ್ರ ಗಣಾಪುರ ರವರು ನಿರೂಪಿಸಿದರು.

ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಸಮಾಜಮುಖಿ ಕಾರ್ಯಗಳ ಮೂಲಕ ಕಾಯಕ ಯೋಗಿ ಎನಿಸಿಕೊಂಡವರು ಸಿದ್ಧರಾಮೇಶ್ವರರು

ಕೊಪ್ಪಳ,ಜ.29-

ಸಮಾಜ ಸುಧಾರಣೆಯ ಜೊತೆಗೆ ಸಮಾಜ ಮುಖಿ ಕಾರ್ಯಗಳನ್ನು ಮಾಡುವುದರ ಮೂಲಕ ಕಾಯಕ ಯೋಗಿ ಎನಿಸಿಕೊಂಡವರು ಶಿವಯೋಗಿ ಸಿದ್ದರಾಮೇಶ್ವರರು ಎಂದು ಗಜೇಂದ್ರಗಡದ ಎಸ್.ಎಸ್.ಭೂಮರೆಡ್ಡಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಅರವಿಂದ ಎಸ್.ವಡ್ಡರ್ ಹೇಳಿದರು.

ಅವರು ಮಂಗಳವಾರ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ, ಮಾತನಾಡಿದರು.

12ನೇ ಶತಮಾನಕ್ಕೂ ಪೂರ್ವದಲ್ಲಿ ಈ ನಾಡಿನಲ್ಲಿ ಮೌಢ್ಯತೆ, ರಾಜ್ಯ ಪ್ರಭುತ್ವದೊಳಗೆ ಗುಲಾಮಗಿರಿಯ ಅಟ್ಟಹಾಸ ನಡೆದಿತ್ತು. ಜಾತಿ ವ್ಯವಸ್ಥೆಯು ತುಂಬಿ ತುಳುಕಿ ಜನರು ಶೋಷಣೆಗೆ ಒಳಗಾಗಿದ್ದರು. ಇಂತಹ ಸಂದರ್ಭದಲ್ಲಿ 12ನೇ ಶತಮಾನದ ಬಸವಾದಿ ಶರಣರ ಹೋರಾಟದಿಂದ ಕಲ್ಯಾಣ ಕ್ರಾಂತಿ ಉಘಮವಾಯಿತು. ಈ ಹೋರಾಟವು ಪ್ರಪಂಚದ ಅತೀದೊಡ್ಡ ಕಲ್ಯಾಣ ಕ್ರಾಂತಿಯಾಗಿದೆ. ಸಮಾಜದ ಸುಧಾರಣೆಯ ಪ್ರತಿಫಲವಾಗಿ ವಚನ ಸಾಹಿತ್ಯ ಹುಟ್ಟಿಕೊಂಡು, ಅನೇಕ ಶರಣರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಬೆಳಕನ್ನು ನೀಡಿದ್ದಾರೆ. ಅಂತಹ ಮಹನೀಯರುಗಳಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ವಿಶಿಷ್ಟ ವಚನಕಾರರಾಗಿ ರೂಪುಗೊಂಡವರು



ಮಹಾನ್ ಶರಣ ಶಿವಯೋಗಿ ಸಿದ್ದರಾಮೇಶ್ವರರು ಎಂದರು.

ಶಿವಯೋಗಿ ಸಿದ್ದರಾಮೇಶ್ವರರು ಪ್ರಸಿದ್ಧ ಸಮಾಜ ಸೇವಕರಾಗಿದ್ದರು. ಅವರು ತಮ್ಮ ಕುಲಕಸುಬನ್ನು ನಿರ್ವಹಿಸುವ ಮೂಲಕ ಕೆರೆಕಟ್ಟೆಗಳನ್ನು ನಿರ್ಮಿಸಿದ್ದರು. ಮಾಡುವ ಕೆಲಸಗಳಲ್ಲಿ ಕೀಳರಿಮೆ ಬಿಟ್ಟು ಸ್ವಾಭಿಮಾನಿಯಾಗಿರಬೇಕು ಎಂಬುದನ್ನು ಅವರು ತಿಳಿಸಿ ಕೊಟ್ಟಿದ್ದಾರೆ. ಪ್ರಸ್ತುತ ದಿನಮಾನಗಳಲ್ಲಿ ಶಿಕ್ಷಣಕ್ಕೆ ಅತಿ ಹೆಚ್ಚಿನ ಮಹತ್ವವಿದೆ. ಹಾಗಾಗಿ ಎಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರ ಭವಿಷ್ಯವನ್ನು ಉಜ್ವಲವಾಗಿ ರೂಪಿಸಬೇಕು. ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಹಾಗೂ ಇತರೆ ಮಹನೀಯರನ್ನು ಆದರ್ಶವಾಗಿಟ್ಟುಕೊಂಡು ಶಿಕ್ಷಣವಂತರಾಗಿ, ನಮ್ಮ ಸಮುದಾಯದ ಅಬಿವೃದ್ಧಿಗೆ ಶ್ರಮಿಸಬೇಕು. ಸಮಾಜದ ಪ್ರಮುಖ ವ್ಯಕ್ತಿಗಳಾಗಿ ಉತ್ತಮ ಕೊಡುಗೆಯನ್ನು ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಬಾಗಲಕೋಟೆ ಮತ್ತು ಚಿತ್ರದುರ್ಗ ಭೋವಿ ಗುರುಪೀಠದ ಶ್ರೀ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮಿಗಳು ಮಾತನಾಡಿ, ಕಾಯಕ ಎಂದರೆ ದೇವರು ಅದನ್ನ ಸ್ಮರಿಸಿಕೊಂಡು ಬಂದಿರುವುದೆ ಭೋವಿ ಸಮಾಜ. ಮನೆ, ಮಠ, ಮಂದಿರ, ಮಹಲ್‌ಗಳನ್ನು ಕಟ್ಟುವ ಭೋವಿ ಸಮಾಜವು ಎಲ್ಲರ ಮನಸ್ಸನ್ನು ಕಟ್ಟಿದೆ. ಶ್ರೀ ಶಿವಯೋಗಿ ಸಿದ್ದರಾಮೇಶ್ವರರು 64 ವಿದ್ಯೆಗಳನ್ನು ಕಲಿತು ಕರಗತ ಮಾಡಿಕೊಂಡವರು. ಶಿಕ್ಷಣವು ಸರ್ವ ಸಮಸ್ಯೆಗಳಿಗೆ ಅಸ್ತ್ರವಾಗಿದ್ದು, ಪ್ರತಿಯೊಬ್ಬರೂ ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು ಅತ್ಯವಶ್ಯವಾಗಿದೆ. ಶ್ರೀ ಶಿವಯೋಗಿ ಸಿದ್ದರಾಮೇಶ್ವರರ ಬಗ್ಗೆ ಅರಿತುಕೊಂಡು ಮತ್ತು ಅವರು ತೋರಿದ ಮಾರ್ಗದಲ್ಲಿ ಎಲ್ಲರೂ ನಡೆಯಬೇಕು ಎಂದರು.

ಭೋವಿ ಸಮಾಜದ ಕೊಪ್ಪಳ ಜಿಲ್ಲಾಧ್ಯಕ್ಷರಾದ ಸುಂಕಪ್ಪ ಮಾಲಗಿತ್ತಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಕರ್ಣಕುಮಾರ್, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಪುಷ್ಪಲತಾ, ಭೋವಿ ಸಮಾಜದ ಮುಖಂಡರಾದ ಮಾಸ್ತೆಪ್ಪ ಕಟ್ಟಿಮನಿ, ರಾಮಣ್ಣ ಹೆಚ್. ಅಳವಂಡಿ, ರಾಮಣ್ಣ ಪೂಜಾರ, ರಮೇಶ ಬಸಾಪಟ್ಟಣ, ರಾಮಣ್ಣ ಅಳವಂಡಿ, ಲಕ್ಷ್ಮಣ ಪೂಜಾರ, ಎಕಪ್ಪ ರ‍್ಯಾವಣಕಿ, ಪರಶುರಾಮ ಹಾಗೂ ಹಲವು ಮುಖಂಡರು ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮೆರವಣಿಗೆ: ಜಯಂತಿ ಕಾರ್ಯಕ್ರಮದ ಪ್ರಯುಕ್ತ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಭಾವಚಿತ್ರದ ಮೆರವಣಿಗೆಯು ಶ್ರೀ ಗವಿಸಿದ್ದೇಶ್ವರ ಮಠದಿಂದ ಪ್ರಾರಂಭಗೊಂಡು, ಗಡಿಯಾರ ಕಂಬ, ಜವಾಹರ ರಸ್ತೆ ಮೂಲಕ ಅಶೋಕ ಸರ್ಕಲ್ ಬಳಿಯ ಸಾಹಿತ್ಯ ಭವನದವರೆಗೆ ಅದ್ದೂರಿಯಾಗಿ ನಡೆಯಿತು. ಈ ಮೆರವಣಿಗೆಯಲ್ಲಿ ಕುಂಭ ಹೊತ್ತು ಮಹಿಳೆಯರು, ಭೋವಿ ಸಮಾಜದವರು ಸೇರಿದಂತೆ ಹಲವಾರು ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಮನೆಮುರುಕ ಮಹಾನಾಯಕ ಮೊದಲಿಗನಲ್ಲ, ಕಡೆಯವನೂ ಆಗಿರುವುದಿಲ್ಲ!

ಅಜಿತ್ ಪವಾರ್ ವಿಮಾನ ಅಪಘಾತದಲ್ಲಿ ತೀರಿ ಹೋಗಿದ್ದಾರೆ. ಮಹಾರಾಷ್ಟ್ರದ ಅಧಿಕಾರ ರಾಜಕಾರಣ ಮತ್ತೊಮ್ಮೆ ಮಗ್ಗುಲು ಬದಲಾಯಿಸುತ್ತಿದೆ. ಕೇಂದ್ರದಲ್ಲಿ ಸರ್ವಾಧಿಕಾರ ಹಿಡಿದಿರುವ ಮೋಶಾ ಜೋಡಿ ಹೊಸ ತಂತ್ರೋಪಾಯ ಹೆಣೆಯಬೇಕಿದೆ. ಹೊಸ ಮನೆ ಮುರುಕ ಮಹಾ ನಾಯಕರನ್ನು ಹುಡುಕಿಕೊಳ್ಳಬೇಕಿದೆ.

2023ರ ಜೂನ್ 27, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಧ್ಯಪ್ರದೇಶದ ಭೋಪಾಲ್ ನಲ್ಲಿ ವಿಧಾನಸಭಾ ಚುನಾವಣೆ ಪ್ರಚಾರ ಭಾಷಣ ಮಾಡುತ್ತಿದ್ದರು. ಮಹಾರಾಷ್ಟ್ರದ ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷ 70 ಸಾವಿರ ಕೋಟಿ ರುಪಾಯಿಗಳ ಹಗರಣದಲ್ಲಿ ಸಿಲುಕಿದೆ ಎಂಬ ಆಪಾದನೆ ಮಾಡಿದರು.

ಅಷ್ಟೊಂದು ದೊಡ್ಡ ಮೊತ್ತದ ಅವ್ಯವಹಾರ ನಡೆದಿದ್ದು, ಆಪಾದಿತರನ್ನು ಮಟ್ಟ ಹಾಕುವುದಾಗಿ ಬಹಿರಂಗವಾಗಿ ಸಾರಿದವರು ಸಣ್ಣ ವ್ಯಕ್ತಿಯೇನೂ ಅಲ್ಲ. ಪ್ರಧಾನಿಯವರೇ ಖುದ್ದು ಮಟ್ಟ ಹಾಕುವುದಾಗಿ ಸಾರಿದ್ದ ವ್ಯಕ್ತಿ ಅವರದೇ ಪಕ್ಷದಲ್ಲಿ ನಾಲ್ಕೇ ದಿನಗಳಲ್ಲಿ ಉಪಮುಖ್ಯಮಂತ್ರಿಯಾಗುತ್ತಾನೆ. ಇದಕ್ಕಿಂತ ದೊಡ್ಡ ಪವಾಡ ಉಂಟೇ?

70 ಸಾವಿರ ಕೋಟಿ ರುಪಾಯಿ ಜುಜುಬಿ ಮೊತ್ತವೇನಲ್ಲ, ಉದಾಹರಣೆಗೆ ಗೃಹಜ್ಯೋತಿ, ಗೃಹಲಕ್ಷ್ಮೀ, ಶಕ್ತಿ, ಅನ್ನಭಾಗ್ಯ, ಯುವನಿಧಿ ಎಂಬ ಐದು ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ವರ್ಷವೊಂದಕ್ಕೆ ವಿನಿಯೋಗಿಸುತ್ತಿರುವ ಅಂದಾಜು ಮೊತ್ತ 52 ಸಾವಿರ ಕೋಟಿ ರುಪಾಯಿ. ಅಜಿತ್ ಪವಾರ್ ವಿರುದ್ಧ ಮೋದೀಜಿ ಮಾಡಿದ್ದ ಆರೋಪ 70 ಸಾವಿರ ಕೋಟಿ ರುಪಾಯಿಯದು. ಸಿದ್ದರಾಮಯ್ಯ ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳ ಒಂದೂಕಾಲು ವರ್ಷದ ಬಜೆಟ್ಟು!

ಪ್ರತಿಪಕ್ಷಗಳನ್ನು ಒಡೆದು, ಅವುಗಳ ಸರ್ಕಾರ ಕೆಡವಿ, ಬಿಜೆಪಿ ಸಮ್ಮಿಶ್ರ ಸರ್ಕಾರ ಸ್ಥಾಪಿಸಲು 70 ಸಾವಿರ ಕೋಟಿ ರುಪಾಯಿಯ ಆರೋಪವನ್ನೂ ಕಡೆಗಣಿಸುವ ಪಕ್ಷ ಅಥವಾ ನಾಯಕ ಮಾಡುವ ಆಪಾದನೆಗಳನ್ನು ದೇಶ ಎಷ್ಟು ಗಂಭೀರವಾಗಿ ಸ್ವೀಕರಿಸಬೇಕು ಎಂಬ ಪ್ರಶ್ನೆಯನ್ನು ಮತದಾರರು ಜಗ್ಗಿಸಿ ಕೇಳುವ ಕಾಲ ಬರಬೇಕಾಗಿದೆ.

ಪ್ರತಿಪಕ್ಷಗಳ ಪ್ರತಿಯೊಬ್ಬ ಭ್ರಷ್ಟ ನಾಯಕನನ್ನೂ ಮಟ್ಟ ಹಾಕುವುದಾಗಿ 2023ರ ಜೂನ್ 27ರಂದು ಮೋದಿಯವರು ತಮ್ಮ ಎಂದಿನ ಗರ್ಜಿಸುವ ಹಾವಭಾವದಲ್ಲಿ ಗುಡುಗಿದ್ದರು. ಈ 70 ಸಾವಿರ ಕೋಟಿ ರುಪಾಯಿ ಹಗರಣ ಆರೋಪಿ ಬೇರಾರೂ ಅಲ್ಲದೆ, ಖುದ್ದು ಅಜಿತ್ ಪವಾರ್ ಆಗಿದ್ದರು.

ಆದರೆ ಪ್ರಧಾನಿ 70 ಸಾವಿರ ಕೋಟಿ ರುಪಾಯಿ ಹಗರಣದ ಆರೋಪ ಮಾಡಿದ್ದು 2023ರ ಜೂನ್ 27ರಂದು. ನಾಲ್ಕೇ ದಿನಗಳ ನಂತರ ಜುಲೈ 2.ರಂದು ಎನ್.ಸಿ.ಪಿ.ಯನ್ನು ಅಡ್ಡಡ್ಡ ಸೀಳಿತ್ತು ಬಿಜೆಪಿ. ಎನ್.ಸಿ.ಪಿ. ನಾಯಕ ಅಜಿತ್ ಪವಾರ್ ಮತ್ತು ಅವರ ಬಣವನ್ನು ಸಮ್ಮಿಶ್ರ ಸರ್ಕಾರಕ್ಕೆ ಸೇರಿಸಿಕೊಂಡು ಉಪಮುಖ್ಯಮಂತ್ರಿ ಹುದ್ದೆಯನ್ನು ಅವರಿಗೆ ನೀಡಿತ್ತು ಬಿಜೆಪಿ. ಅವರೊಂದಿಗೆ ಬಂದಿರುವ ಇತರೆ ಶಾಸಕರಿಗೆ ಮಂತ್ರಿ ಸ್ಥಾನಗಳನ್ನೂ ನೀಡಿತ್ತು. ಈ ಶಾಸಕರ ಮೇಲೆಯೂ ಭ್ರಷ್ಟಾಚಾರದ ಗಂಭೀರ ಆರೋಪಗಳಿದ್ದವು. ಅಜಿತ್ ಮತ್ತು ಅವರ ಈ ಸಮೀಪವರ್ತಿಗಳ ಮೇಲೆ ಆದಾಯ ತೆರಿಗೆ, ಜಾರಿ ನಿರ್ದೇಶನಾಲಯದಂತಹ ಕೇಂದ್ರೀಯ ಏಜೆನ್ಸಿ ಗಳನ್ನು ಛೂ ಬಿಟ್ಟದ್ದು ಇದೇ ಮೋದಿ ಸರ್ಕಾರ.

ಅಜಿತ್ ಜೊತೆ ಬಿಜೆಪಿ ಸಂಗ ಬೆಳೆಸಿರುವ ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದ ಪ್ರಫುಲ್ ಪಟೇಲ್ ಆಸ್ತಿಪಾಸ್ತಿಗಳನ್ನು ಜಾರಿ ನಿರ್ದೇಶನಾಲಯ 2022ರಲ್ಲಿಯಷ್ಟೇ ಮುಟ್ಟುಗೋಲು ಹಾಕಿಕೊಂಡಿತ್ತು. ತಾವು ಈ ಹಿಂದೆ ಮಹಾರಾಷ್ಟ್ರದ ಲೋಕೋಪಯೋಗಿ ಸಚಿವರಾಗಿದ್ದಾಗ ಸಾವಿರ ಕೋಟಿ ರುಪಾಯಿಗಳ ಹಗರಣಕ್ಕಾಗಿ ಎರಡು ವರ್ಷ ಜೈಲಿನಲ್ಲಿದ್ದು ಹೊರಬಂದಿರುವವರು ಇದೇ ಪಕ್ಷದ ಮತ್ತೊಬ್ಬ ತಲೆಯಾಳು ಛಗನ್ ಭುಜಬಲ್. ಇಂತಹುದೇ ಮತ್ತೊಬ್ಬ ನಾಯಕ ಹಸನ್ ಮುಶ್ರಿಫ್. ಜಾರಿ ನಿರ್ದೇಶನಾಲಯ ಈತನ ಬೆನ್ನು ಬಿದ್ದಿತ್ತು.

ಅಜಿತ್ ದಾದಾ ಜೈಲಿನ ಕಂಬಿ ಎಣಿಸುವಂತೆ ಮಾಡುತ್ತೇವೆ, ಜೈಲಿನಲ್ಲಿ ಹಿಟ್ಟು ಬೀಸಲು ಹಚ್ಚುತ್ತೇವೆ ಎಂದೆಲ್ಲ ಅಂದು ಸಾರ್ವಜನಿಕ ಭಾಷಣ ಮಾಡಿ ಪ್ರತಾಪ ಕೊಚ್ಚಿಕೊಂಡಿದ್ದರು ಮಹಾರಾಷ್ಟ್ರದ ಹಾಲಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್. 2023ರಲ್ಲಿ ಮೋದಿ ಆಡಿದ್ದ ಮಾತುಗಳನ್ನು ನಾಲ್ಕೇ ದಿನಗಳಲ್ಲಿ ನುಂಗಿಕೊಳ್ಳುವಂತೆ ಮನವರಿಕೆ ಮಾಡಿದವರು ಇದೇ ಫಡಣವೀಸ್.

ಅಜಿತ್ ಪವಾರ್ ಪಾತ್ರಧಾರಿಯಾಗಿದ್ದ ಮತ್ತೊಂದು ವಿಪರೀತ ವಿಡಂಬನೆಯನ್ನು ಇಲ್ಲಿ ಉಲ್ಲೇಖಿಸಬೇಕಿದೆ. ಅದೆಂದರೆ 2019ರಲ್ಲಿ ಅಜಿತ್ ಪವಾರ್ ಅವರನ್ನು ರಾತ್ರೋರಾತ್ರಿ ಅಪಹರಿಸಿ ಬೆಳಗಿನ ಜಾವ ಉಪಮುಖ್ಯಮಂತ್ರಿಯ ಪ್ರಮಾಣವಚನ ಕೊಡಿಸಿತ್ತು ಬಿಜೆಪಿ. ಮುಖ್ಯಮಂತ್ರಿಯಾಗಿ ಪ್ರಮಾಣವಚನ ತೆಗೆದುಕೊಂಡವರು ಫಡಣವೀಸ್ ಅವರೇ. ಮೋದಿ-ಶಾ ಅವರ ಅನುಮತಿಯಿಂದಲೇ ಈ ಕಾರ್ಯಾಚರಣೆ ಜರುಗಿತ್ತು. ಆ ಸಂದರ್ಭದಲ್ಲಿ ಅಜಿತ್ ಪವಾರ್ ಮೇಲಿನ 70 ಸಾವಿರ ಕೋಟಿ ರುಪಾಯಿಗಳ ಆಪಾದನೆಯನ್ನು ಹಿಂಪಡೆಯಲಾಗಿದೆ ಎಂದು ಘೋಷಿಸಲಾಗಿತ್ತು. ಪವಾರ್ ಎನ್.ಸಿ.ಪಿ.ಗೆ ಮರಳಿದ ಕೂಡಲೇ ಈ ಆಪಾದನೆಗೆ ಜೀವ ಬರುತ್ತದೆ. ತೊರೆದ ತಕ್ಷಣವೇ ಅಡಗಿ ಹೋಗುತ್ತದೆ!

ಶರದ್ ಪವಾರ್ ಸ್ಥಾಪಿಸಿದ ಎನ್.ಸಿ.ಪಿ.ಯನ್ನೂ, ಬಾಳಾಸಾಹೇಬ್ ಠಾಕರೆ ಹುಟ್ಟು ಹಾಕಿ ಬೆಳೆಸಿದ ಶಿವಸೇನೆಯನ್ನೂ ಒಡೆದು ಹೋಳು ಮಾಡಿ ಮಹಾವಿಕಾಸ್ ಅಘಾಡಿ ಸರ್ಕಾರವನ್ನು ಕೆಡವಿ ಶಿಂಧೆ-ಪವಾ-ಫಡಣವೀಸ್ ಸರ್ಕಾರವನ್ನು ರಚಿಸಿತ್ತು ಮೋಶಾ ಜೋಡಿ.

ಬಿಜೆಪಿಯ ಬಳಿ ದೈತ್ಯ ವಾಷಿಂಗ್ ಮಷೀನ್ ಉಂಟು.ಈ ವಾಷಿಂಗ್ ಮಷೀನ್ ಗೆ ಬಳಸುವ ನೀರು ಸಾಕ್ಷಾತ್ ಗಂಗಾಜಲ. ಹೀಗಾಗಿ ಈ ವಾಷಿಂಗ್ ಮಷೀನಿಗೆ ಹಾಕಿದರೆ ಭ್ರಷ್ಟಾತಿಭ್ರಷ್ಟರೂ, ಕಡು ಪಾತಕಿಗಳೂ ಪರಮಪವಿತ್ರರಾಗಿ ಹೊರ ಬರುತ್ತಾರೆ ಎಂಬ ವ್ಯಂಗ್ಯವೊಂದು ಚಾಲ್ತಿಗೆ ಬಂದಿತು. ಈ ಉಪಮೆ ಅತಿರಂಜಿತ ಎನಿಸಿದರೂ ಅಸತ್ಯವೇನೂ ಅಲ್ಲ.

ಅಜಿತ್ ಪವಾರ್ ಮೇಲೆ 70 ಸಾವಿರ ಕೋಟಿ ರೂ. ಹಗರಣದ ಆರೋಪಿ ಎಂದು ಮೋದಿಯವರೂ, ಅಜಿತ್ ಜೈಲುಪಾಲಾಗಿ ಹಿಟ್ಟು ಬೀಸುವುದು ತಪ್ಪದೆಂದು ಮಹಾರಾಷ್ಟ್ರದ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ಭಾಷಣ ಮಾಡಿರುವ ವಿಡಿಯೋಗಳು ಯೂಟ್ಯೂಬ್ ನಲ್ಲಿ ಈಗಲೂ ಸಲೀಸಾಗಿ ಸಿಗುತ್ತವೆ.

ಹಣಕಾಸಿನ ಅಪರಾಧದಡಿ ಇಡಿ ದಾಳಿಯಾಗಿ ಪ್ರಕರಣ ಎದುರಿಸುತ್ತಿರುವ ಉದ್ಯಮ ಸಂಸ್ಥೆಗಳು, ಖಾಸಗಿ ಬ್ಯಾಂಕುಗಳು, ಕಪ್ಪು ಪಟ್ಟಿಗೆ ಒಳಗಾದ ಸಂಸ್ಥೆಗಳು ಬಿಜೆಪಿಗೆ ಚುನಾವಾಣಾ ಬಾಂಡ್ ಮೂಲಕ ದೇಣಿಗೆ ನೀಡಿರುವುದು, ಅದಕ್ಕೆ ಪ್ರತಿಯಾಗಿ ಇಡಿ ಪ್ರಕರಣಗಳು ಮುಕ್ತಾಯಗೊಂಡಿರುವ ಇಂದ್ರಜಾಲ ಕಳೆದ ಲೋಕಸಭಾ ಚುನಾವಣೆಗೆ ಕೆಲವೇ ತಿಂಗಳಿರುವಾಗ ಬಟಾ ಬಯಲಾಗಿತ್ತು. ಚುನಾವಣಾ ಬಾಂಡ್‌ನ ಮಾಹಿತಿ ಬಹಿರಂಗಪಡಿಸಬೇಕು ಎಂಬ ಸುಪ್ರೀಂ ಕೋರ್ಟ್ ಎಸ್‌ಬಿಐಗೆ ಸುಪ್ರೀಂ ಕೋರ್ಟ್ ಚಾಟಿ ಬೀಸಿದ ನಂತರ ಅನಿವಾರ್ಯವಾಗಿ ಬಾಂಡ್ ನೀಡಿದವರ ಮಾಹಿತಿ ಬಹಿರಂಗಪಡಿಸಲಾಗಿತ್ತು. ಆ ವೇಳೆ ಮೋದಿ ಸರ್ಕಾರದ ಬಣ್ಣ ಬಯಲಾಗಿತ್ತು. ಆ ನಂತರ ಇಡಿ ದಾಳಿಗಳು ಪಕ್ಷಪಾತದ ಗಬ್ಬು ನಾತ ಬೀರುತ್ತಿವೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇನೆ, ನಾ ಖಾವೂಂಗ ಖಾನೇ ದೂಂಗ ಎಂದು ಅಬ್ಬರದ ಭಾಷಣ ಬಿಗಿದ ನರೇಂದ್ರ ಮೋದಿ ಅವರು ಭ್ರಷ್ಟಾಚಾರವನ್ನು ತಡೆಯಲೆಂದೇ ಇರುವ ಜಾರಿ ನಿರ್ದೇಶನಾಲಯವನ್ನು ಹೇಗೆಲ್ಲ ದುರುಪಯೋಗಪಡಿಸಿಕೊಂಡಿದ್ದರು ಎಂಬುದು ದೇಶದ ಜನರ ಮುಂದೆ ಬಹಿರಂಗವಾಗಿತ್ತು. ಆರ್ಥಿಕ ಅಪರಾಧಿಗಳು, ಭ್ರಷ್ಟರನ್ನೆಲ್ಲ ತಮ್ಮ ಪಕ್ಷಕ್ಕೆ ಸೇರ್ಪಡೆ ಮಾಡಿ, ಮಂತ್ರಿ, ಮುಖ್ಯಮಂತ್ರಿ ಮಾಡಿ ಅವರನ್ನು ದೋಷಮುಕ್ತಗೊಳಿಸಿ ಪ್ರಜಾಪ್ರಭುತ್ವಕ್ಕೆ ಕಳಂಕ ತಂದಿದ್ದಾರೆ. ತಮ್ಮ ಮೂರನೆಯ ಅಧಿಕಾರಾವಧಿಯಲ್ಲೂ ಇಡಿಯ ದುರುಪಯೋಗವನ್ನು ನಿಲ್ಲಿಸಿಲ್ಲ ಮೋದಿ.

ಈ ದಾಳಿ ಕೇವಲ ಪ್ರತಿಪಕ್ಷಗಳ ಸರ್ಕಾರಗಳಿರುವ ರಾಜ್ಯಗಳು, ಪ್ರತಿಪಕ್ಷಗಳ ನಾಯಕರು, ಟೀಕೆ ಟಿಪ್ಪಣಿ ಮಾಡುವವರ ಮೇಲೆ ಇಡಿಯನ್ನು ಛೂ ಬಿಡಲಾಗುತ್ತಿದೆ. ಪ್ರತಿಪಕ್ಷಗಳ ಹಲವು ನಾಯಕರು ಇಡಿ ದಾಳಿಯ ಭಯಕ್ಕೆ ಬಿಜೆಪಿ ಸೇರಿಕೊಂಡದ್ದೂ ಇದೆ. ದಾಳಿ ನಡೆದ ನಂತರ ಕೆಲವರು ಬಿಜೆಪಿ ಸೇರಿದ್ದೂ ಇದೆ. ಬಿಜೆಪಿ ಸೇರಿದ ನಂತರ ದಾಳಿಗಳು ನಿಂತು ಬಿಡುತ್ತವೆ. ತನಿಖೆ ಕೂಡ ಕ್ರಮೇಣ ಸ್ಥಗಿತಗೊಳ್ಳುತ್ತದೆ.

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಅಶೋಕ ಚವ್ಹಾಣ್ ಅವರನ್ನು ಆದರ್ಶ್ ಹೌಸಿಂಗ್ ಸೊಸೈಟಿ ಹಗರಣದ ಮುಖ್ಯ ಆರೋಪಿಯೆಂದು ಭರ್ಜರಿ ಭಾಷಣ ಮಾಡಿದ್ದವರು ಖುದ್ದು ಮೋದಿಯವರೇ. ನಮ್ಮ ಯೋಧರ ಹುತಾತ್ಮರ ಕುಟುಂಬಗಳಿಗೆ ಮೋಸ ಮಾಡಿದ್ದರೆಂದು 2019ರ ಚುನಾವಣಾ ಭಾಷಣದಲ್ಲೇ ದಾಳಿ ನಡೆಸಿದ್ದರು. ಅಂತಹವರು ಈಗ ಬಿಜೆಪಿಯಲ್ಲಿದ್ದಾರೆ. ನಾನು ಬಿಜೆಪಿ ಸೇರದೆ ಹೋದರೆ ಆದರ್ಶ್ ಹಗರಣದಲ್ಲಿ ನನ್ನ ಮಗಳನ್ನು ಬಂಧಿಸುವ ಬೆದರಿಕೆ ಹಾಕಿದ್ದಾರೆಂದು ಚವ್ಹಾಣ್ ತಮ್ಮ ತಾಯಿಯ (ಸೋನಿಯಾಗಾಂಧಿ) ಮುಂದೆ ಕಣ್ಣೀರುಗರೆದರೆಂದು ರಾಹುಲ್ ಗಾಂಧಿ ಬಹಿರಂಗ ಭಾಷಣದಲ್ಲಿ ಹೇಳಿದರು. ರಾಹುಲ್ ಹೇಳಿಕೆಯನ್ನು ಚವ್ಹಾಣ್ ಮತ್ತು ಬಿಜೆಪಿ ಈವರೆಗೆ ಅಲ್ಲಗಳೆದಿಲ್ಲ.

ಅಜಿತ್ ಪವಾರ್ ಅವರಿಗೆ ಮೊದಲೇ ಶಿವಸೇನೆಯನ್ನು ಒಡೆದು ಹೊರಬಂದು ಫಡಣವೀಸ್ ಕೈ ಕುಲುಕಿ ಮುಖ್ಯಮಂತ್ರಿ ಗದ್ದುಗೆ ದಕ್ಕಿಸಿಕೊಂಡಿದ್ದವರು ಏಕನಾಥ ಶಿಂಧೆ. ದಡ ಸೇರಿದ ಮೇಲೆ ಅಂಬಿಗನ ಹಂಗ್ಯಾಕೆ ಎಂಬುದು ಮೋಶಾ ಯುಗದ ಬಿಜೆಪಿಯ ಧೋರಣೆ. ಶಿಂಧೆ-ಅಜಿತ್ ಪವಾರ್ ಅವರಿಂದ ಮನೆಮುರಿಸಿ ಅವರನ್ನು ಎಡಬಲಕ್ಕಿಟ್ಟುಕೊಂಡು ಇತ್ತೀಚೆಗೆ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳನ್ನು ಗೆದ್ದಿತ್ತು ಬಿಜೆಪಿ. ಶಿವಸೇನೆಯ ಮನೆ ಮುರಿದು ಬಂದ ಶಿಂಧೆಯವರಿಗೆ ಬಿಜೆಪಿ ನೀಡಿದ್ದ ಮುಖ್ಯಮಂತ್ರಿ ಹುದ್ದೆ ನಾಯಿ ತಲೆಯ ಮೇಲಿನ ಬುತ್ತಿಯಾಗಿ ಕಳೆದು ಹೋಯಿತು. ವಿಧಾನಸಭಾ ಚುನಾವಣೆಯ ನಂತರ ಫಡಣವೀಸ್ ಮುಖ್ಯಮಂತ್ರಿಯಾದರು. ಶಿಂಧೆಯವರನ್ನು ಮೂಲೆಗುಂಪು ಮಾಡಲು ಮುಂದಾಗಿತ್ತು ಮೋದಿ-ಅಮಿತ್ ಶಾ-ಫಡಣವೀಸ್ ತ್ರಿವಳಿ.

ಅಜಿತ್ ಪವಾರ್ ಇದೀಗ ವಿಮಾನ ಅಪಘಾತದಲ್ಲಿ ತೀರಿ ಹೋಗಿದ್ದಾರೆ. ಮಹಾರಾಷ್ಟ್ರದ ಅಧಿಕಾರ ರಾಜಕಾರಣ ಮತ್ತೊಮ್ಮೆ ಮಗ್ಗುಲು ಬದಲಾಯಿಸುತ್ತಿದೆ. ಕೇಂದ್ರದಲ್ಲಿ ಸರ್ವಾಧಿಕಾರ ಹಿಡಿದಿರುವ ಮೋಶಾ ಜೋಡಿ ಹೊಸ ತಂತ್ರೋಪಾಯ ಹೆಣೆಯಬೇಕಿದೆ. ಹೊಸ ಮನೆ ಮುರುಕ ಮಹಾ ನಾಯಕರನ್ನು ಹುಡುಕಿಕೊಳ್ಳಬೇಕಿದೆ.

ಅಧಿಕಾರ ಮತ್ತು ಐಶ್ವರ್ಯದ ಆಮಿಷಗಳಿಗಾಗಿ ಮನೆ ಮುರಿಯುವ ರಾಜಕಾರಣಿಗಳ ಸರಣಿಯಲ್ಲಿ ಶಿಂಧೆ, ಅಜಿತ್ ಪವಾರ್ ಮೊದಲಿಗರೇನಲ್ಲ, ಕೊನೆಯವರೂ ಆಗಿರುವುದಿಲ್ಲ

ಜಾರ್ಖಂಡ್ ಕೂಲಿ ಕೇಳಿದ್ದೇ ಅಪರಾಧವಾಯಿತೇ? ದಲಿತ ಮಹಿಳೆ ಮೇಲೆ ಅಮಾನುಷ ಹಲ್ಲೆ ಅಕ್ಷಮ್ಯ

ಕಳೆದ 11 ವರ್ಷಗಳ (2014-2025) ಅವಧಿಯನ್ನು ಅವಲೋಕಿಸಿದರೆ, ದೇಶಾದ್ಯಂತ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಆತಂಕಕಾರಿ ಏರಿಕೆ ಕಂಡುಬಂದಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ಅಂಕಿಅಂಶಗಳ ಪ್ರಕಾರ, 2014ರಿಂದ ಇಲ್ಲಿಯವರೆಗೆ ಪರಿಶಿಷ್ಟ ಜಾತಿಗಳ () ಮೇಲಿನ ಅಪರಾಧ ಪ್ರಕರಣಗಳು ಸುಮಾರು ಶೇ. 35ಕ್ಕೂ ಹೆಚ್ಚು ಏರಿಕೆಯಾಗಿದೆ



ಹೊಟ್ಟೆಪಾಡಿಗಾಗಿ ದುಡಿಯುವುದು ಪ್ರತಿಯೊಬ್ಬರ ಹಕ್ಕು, ಆದರೆ ಮಾಡಿದ ಕೆಲಸಕ್ಕೆ ಕೂಲಿ ಕೇಳಿದ್ದೇ ಅಪರಾಧವೆಂಬಂತೆ ದಲಿತ ಮಹಿಳೆಯೊಬ್ಬರ ಮೇಲೆ ಅಂಗಡಿ ಮಾಲೀಕ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿರುವ ಆಘಾತಕಾರಿ ಘಟನೆ ಜಾರ್ಖಂಡ್‌ನಲ್ಲಿ ನಡೆದಿದೆ. ಈ ಘಟನೆಯು ದೇಶದಲ್ಲಿ ಇನ್ನೂ ಜೀವಂತವಾಗಿರುವ ಊಳಿಗಮಾನ್ಯ ಪದ್ಧತಿ ಮತ್ತು ದಲಿತರ ಮೇಲಿನ ದೌರ್ಜನ್ಯದ ಕರಾಳ ಮುಖವನ್ನು ಮತ್ತೊಮ್ಮೆ ಅನಾವರಣಗೊಳಿಸಿದೆ.

ಜಾರ್ಖಂಡ್‌ನ ಪಲಮು ಜಿಲ್ಲೆಯ ಮೇದಿನಿನಗರದ ಸಮೀಪದ ಮಾರುಕಟ್ಟೆಯೊಂದರಲ್ಲಿ ಈ ಅಮಾನವೀಯ ಕೃತ್ಯ ಜರುಗಿದ್ದು, ಸಂತ್ರಸ್ತ ಮಹಿಳೆಯು ಜೀವನ ನಿರ್ವಹಣೆಗಾಗಿ ಅಂಗಡಿಗಳ ಮುಂಭಾಗ ಕಸ ಗುಡಿಸುವ ಕೆಲಸ ಮಾಡುತ್ತಿದ್ದರು. ಎಂದಿನಂತೆ ಅಂಗಡಿಯ ಮುಂಭಾಗ ಸ್ವಚ್ಛಗೊಳಿಸಿದ ಬಳಿಕ, ತನಗೆ ಸಲ್ಲಬೇಕಾದ ಅಲ್ಪ ಮೊತ್ತದ ಕೂಲಿಯನ್ನು ಅಂಗಡಿ ಮಾಲೀಕನ ಬಳಿ ಕೇಳಿದಾಗ, ಕೂಲಿ ನೀಡುವ ಬದಲು ಆಕ್ರೋಶಗೊಂಡ ಅಂಗಡಿ ಮಾಲೀಕ, ಸಾರ್ವಜನಿಕರ ಮುಂದೆಯೇ ಮಹಿಳೆಯ ಕೂದಲನ್ನು ಹಿಡಿದು ಎಳೆದಾಡಿದ್ದಲ್ಲದೆ, ಹಿಗ್ಗಾಮುಗ್ಗಾ ಥಳಿಸಿದ್ದಾನೆ. ಕೇವಲ ಹಲ್ಲೆ ಮಾಡಿದ್ದಲ್ಲದೆ, ಮಹಿಳೆಯ ಜಾತಿಯನ್ನು ಪ್ರಸ್ತಾಪಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ ಎಂಬುದು ದೂರಿನಲ್ಲಿ ಉಲ್ಲೇಖವಾಗಿದೆ.

ಸಂತ್ರಸ್ತೆಯ ದೂರಿನ ಮೇರೆಗೆ ಪೊಲೀಸರು ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ ಎನ್ನಲಾಗಿದ್ದರೂ, ಇಂತಹ ಘಟನೆಗಳು ಜಾರ್ಖುಂಡ್‌ನಲ್ಲಿ ಹೊಸದೇನಲ್ಲ. ಇತ್ತೀಚಿನ ದಿನಗಳಲ್ಲಿ ನೀರು ಮುಟ್ಟಿದ್ದಕ್ಕೆ ಅಥವಾ ದೇವಸ್ಥಾನ ಪ್ರವೇಶಿಸಿದ್ದಕ್ಕೆ ದಲಿತರ ಮೇಲೆ ಹಲ್ಲೆ ನಡೆದ ವರದಿಗಳು ಅಲ್ಲಿನ ಗ್ರಾಮೀಣ ಭಾಗಗಳಿಂದ ಹೆಚ್ಚಾಗುತ್ತಲೇ ಇವೆ.

ಕೂಲಿ ಕೇಳುವುದು, ಭೂಮಿಯ ಹಕ್ಕು ಕೇಳುವುದು ಅಥವಾ ಮೇಲ್ಜಾತಿಯವರ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುವುದು ಅಲ್ಲಿನ ಕೆಲವು ಪ್ರಬಲ ವರ್ಗಗಳಿಗೆ ಇಂದಿಗೂ ಸಹಿಸಲಾಗದ ಸಂಗತಿಯಾಗಿದೆ. ಈ ನಿರ್ದಿಷ್ಟ ಘಟನೆಯಲ್ಲಿಯೂ ಸಹ, ತಾನು ದುಡಿದ ಹಣವನ್ನು ಕೇಳುವ ಧೈರ್ಯ ಆ ಮಹಿಳೆ ತೋರಿದ್ದೇ ಆಕೆಯ ಮೇಲಿನ ಹಲ್ಲೆಗೆ ಪ್ರಮುಖ ಕಾರಣವಾಯಿತು ಎಂಬುದು ಸಾಮಾಜಿಕ ವ್ಯವಸ್ಥೆಯ ಅಣಕವಾಗಿದೆ.

ಕಳೆದ 11 ವರ್ಷಗಳ (2014-2025) ಅವಧಿಯನ್ನು ಅವಲೋಕಿಸಿದರೆ, ದೇಶಾದ್ಯಂತ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಆತಂಕಕಾರಿ ಏರಿಕೆ ಕಂಡುಬಂದಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ಅಂಕಿಅಂಶಗಳ ಪ್ರಕಾರ, 2014ರಿಂದ ಇಲ್ಲಿಯವರೆಗೆ ಪರಿಶಿಷ್ಟ ಜಾತಿಗಳ () ಮೇಲಿನ ಅಪರಾಧ ಪ್ರಕರಣಗಳು ಸುಮಾರು ಶೇ. 35ಕ್ಕೂ ಹೆಚ್ಚು ಏರಿಕೆಯಾಗಿದೆ. ವಾರ್ಷಿಕವಾಗಿ ಸರಾಸರಿ 50,000ಕ್ಕೂ ಹೆಚ್ಚು ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದರೂ, ಆರೋಪಿಗಳಿಗೆ ಶಿಕ್ಷೆಯಾಗುವ ಪ್ರಮಾಣ ತೀರಾ ಕಡಿಮೆಯಿದೆ.

ಸಾಕ್ಷ್ಯಾಧಾರಗಳ ಕೊರತೆ ಮತ್ತು ಸಾಮಾಜಿಕ ಒತ್ತಡದಿಂದಾಗಿ ಶೇ. 50ರಷ್ಟು ಪ್ರಕರಣಗಳಲ್ಲಿ ರಾಜಿ ಮಾಡಿಕೊಳ್ಳಲಾಗುತ್ತದೆ ಅಥವಾ ಸಾಕ್ಷ್ಯಾಧಾರಗಳಿಲ್ಲದೆ ಬಿದ್ದು ಹೋಗುತ್ತವೆ. ಅದರಲ್ಲೂ ಜಾರ್ಖಂಡ್‌ನಲ್ಲಿ ಆಳವಾಗಿ ಬೇರೂರಿರುವ ಊಳಿಗಮಾನ್ಯ ಮನಸ್ಥಿತಿಯಿಂದಾಗಿ ದಲಿತ ಮಹಿಳೆಯರ ಮೇಲಿನ ದೌರ್ಜನ್ಯಗಳು, ಅಂದರೆ ಅತ್ಯಾಚಾರ, ವಿವಸ್ತ್ರಗೊಳಿಸುವುದು, ಸೇರಿದಂತೆ ದೌರ್ಜನ್ಯ ನಡೆಸುವ ಪ್ರಕರಣಗಳು ಹೆಚ್ಚಾಗಿವೆ.


ಇತ್ತೀಚಿನ ವರ್ಷಗಳಲ್ಲಿ ದೌರ್ಜನ್ಯದ ಸ್ವರೂಪವೂ ಬದಲಾಗಿದ್ದು, ಹಿಂದೆ ದೈಹಿಕ ಹಲ್ಲೆಗಳು ಮಾತ್ರ ನಡೆಯುತ್ತಿದ್ದವು, ಆದರೆ ಈಗ ಸಾಮಾಜಿಕ ಜಾಲತಾಣಗಳ ಯುಗದಲ್ಲಿ, ಹಲ್ಲೆ ಮಾಡಿ ಅದನ್ನು ವಿಡಿಯೋ ಮಾಡಿ ಹರಿಬಿಡುವ ವಿಕೃತ ಪ್ರವೃತ್ತಿ ಹೆಚ್ಚುತ್ತಿದೆ. ಇದು ಸಂತ್ರಸ್ತರನ್ನು ಕೇವಲ ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ಕುಗ್ಗಿಸುವ ಮತ್ತು ಸಾರ್ವಜನಿಕವಾಗಿ ಅವಮಾನಿಸುವ ಕುತಂತ್ರವಾಗಿದೆ.

ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ದಲಿತರ ಮೇಲೆ ಮೀಸೆ ಬಿಟ್ಟಿದ್ದಕ್ಕೆ ಹಲ್ಲೆ, ಮದುವೆಯಲ್ಲಿ ಕುದುರೆ ಏರಿದ್ದಕ್ಕೆ ಬಹಿಷ್ಕಾರದಂತಹ ಘಟನೆಗಳು ಕಳೆದ ಒಂದು ದಶಕದಲ್ಲಿ ಸಂವಿಧಾನದ ಆಶಯಗಳಿಗೆ ಸವಾಲಾಗಿ ಪರಿಣಮಿಸಿವೆ. ಜಾರ್ಖಂಡ್‌ನ ಈ ಇತ್ತೀಚಿನ ಘಟನೆಯು ಕೇವಲ ಒಬ್ಬ ಮಹಿಳೆಯ ಮೇಲಿನ ಹಲ್ಲೆಯಲ್ಲ, ಇದು ಇಡೀ ವ್ಯವಸ್ಥೆಯ ಮೇಲಿನ ಕಪ್ಪುಚುಕ್ಕೆ. ಕಾನೂನುಗಳು ಎಷ್ಟೇ ಕಠಿಣವಾಗಿದ್ದರೂ, ಸಮಾಜದ ಮನಸ್ಥಿತಿ ಬದಲಾಗದ ಹೊರತು, ಅಂಗಡಿ ಮುಂಭಾಗ ಕಸ ಗುಡಿಸುವ ತಾಯಂದಿರು ತಮ್ಮ ಹಕ್ಕಿನ ಕೂಲಿ ಕೇಳಲು ಭಯಪಡುವ ಸ್ಥಿತಿ ಬದಲಾಗದು.

ಅಂತರ್ಜಾತಿ ಮದುವೆ ಕುಟುಂಬಗಳಿಗೆ ಬಹಿಷ್ಕಾರ: ಬಿಜೆಪಿ ಆಡಳಿತದ ರಾಜ್ಯ ಯಾವ ಕಾಲಮಾನದಲ್ಲಿದೆ?

ಬಿಜೆಪಿ ಆಡಳಿತದ ಮಧ್ಯಪ್ರದೇಶದಲ್ಲಿಯೂ ಸಾಮಾಜಿಕ ಬಹಿಷ್ಕಾರ ತಡೆ ಕಾಯ್ದೆಯನ್ನು ಜಾರಿಗೊಳಿಸಬಹುದಲ್ಲವೇ? ಸರ್ಕಾರ ಹಿಂಜರಿಯುತ್ತಿರುವುದೇಕೆ? ಬಿಜೆಪಿ ಆಡಳಿತದ ರಾಜ್ಯ ಯಾವ ಕಾಲಮಾನದಲ್ಲಿದೆ? ಕಾಲಮಾನದಲ್ಲಿ ಹಿಮ್ಮುಖವಾಗಿ ಚಲಿಸುತ್ತಿರುವುದಲ್ಲವೇ?

ದೇಶದಲ್ಲಿ ಅಂತರ್ಜಾತಿ ವಿವಾಹ ಪ್ರಮಾಣಗಳು ಗಮನಾರ್ಹವಾಗಿ ಏರಿಕೆ ಕಾಣುತ್ತಿದೆ. ಶಿಕ್ಷಣ, ನಗರೀಕರಣ ಮತ್ತು ಸ'ಕಾ'ರ'ದ' ಪ್ರೋತ್ಸಾಹದಾಯಕ ಕ್ರಮಗಳೇ ಇದಕ್ಕೆ ಕಾರಣ ಎಂದರೆ ತಪ್ಪಾಗಲಾರದು. ಕಳೆದ ಕೆಲವು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಅಂತ'ರ್ಜಾತಿ ವಿವಾಹಗಳಿಗಾಗಿ ಅಜಿ ಶೇ.33ರಷ್ಟು ಹೆಚ್ಚಳವಾ



ಸಂಖ್ಯೆಯು 5,136ಕ್ಕೆ ತಲುಪಿದೆ. ಆದರೆ ಈ ರೀತಿ ಮದುವೆಯಾದವರಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ಘಟನೆಗಳೂ ಅಲ್ಲಲ್ಲಿ ನಡೆಯುತ್ತಿರುವ ಹಿನ್ನೆಲೆ ಕರ್ನಾಟಕ ಸಾಮಾಜಿಕ ಬಹಿಷ್ಕಾರ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ-2025 ಜಾರಿ ಮಾಡಲಾಗಿದೆ. ಕಾಲಮಾನಕ್ಕೆ ತಕ್ಕುದಾಗಿ ಸಾಮಾಜಿಕ ಸುಧಾರಣೆಗಳೂ ಆಗುತ್ತಿದೆ. ಆದರೆ ಬಿಜೆಪಿ ಆಡಳಿತವಿರುವ ಮಧ್ಯಪ್ರದೇಶ ಮಾತ್ರ ಕಾಲಮಾನದಲ್ಲಿ ಹಿಮ್ಮುಖವಾಗಿ ಚಲಿಸುತ್ತಿರುವಂತಿದೆ. ಅಂತರ್ಜಾತಿ ವಿವಾಹವಾದರೆ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗುತ್ತದೆ ಎಂದು ಗ್ರಾಮ ಪಂಚಾಯತಿಯೇ ಘೋಷಿಸಿದೆ!

ಆರು ತಿಂಗಳ ಅವಧಿಯಲ್ಲಿ ಅಂತರ್ಜಾತಿ ವಿವಾಹ, ಪ್ರೇಮ ವಿವಾಹಗಳು ಅಧಿಕವಾಗಿದೆ. ಇನ್ನು ಮುಂದೆ ಕುಟುಂಬದ ಒಪ್ಪಿಗೆ ಇಲ್ಲದ ಪ್ರೇಮ ವಿವಾಹಗಳು ನಡೆದರೆ, ಅವರ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗುತ್ತದೆ ಎಂದು ಮಧ್ಯಪ್ರದೇಶದ ರತ್ಲಂ ಜಿಲ್ಲೆಯ ಪಂಚೇವಾ ಗ್ರಾಮ ಪಂಚಾಯತಿಯು ಘೋಷಿಸಿದೆ. ಆರ್ಥಿಕ ನಿರ್ಬಂಧ ಹೇರುವುದಾಗಿಯೂ ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ. ಅಷ್ಟಕ್ಕೂ ಮಧ್ಯಪ್ರದೇಶಲ್ಲಿ ಅಥವಾ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಇಂತಹ ಕಾನೂನುಬಾಹಿರ ಸಾಮಾಜಿಕ ಬಹಿಷ್ಕಾರವನ್ನು ಗ್ರಾಮಪಂಚಾಯತ್‌ಗಳೇ ಜಾರಿ ಮಾಡುವುದು ಇದೇ ಮೊದಲೇನಲ್ಲ. ಈ ಹಿಂದೆಯೂ ಹಲವು ಬಾರಿ ನಡೆದಿದೆ. ಅದು ಅಂತರ್ಜಾತಿ ವಿವಾಹವಾದ ಕಾರಣಕ್ಕೆ ಮಾತ್ರವಲ್ಲ ದಲಿತ ವ್ಯಕ್ತಿಯಿಂದ ಪ್ರಸಾದ ಸ್ವೀಕರಿಸಿದ್ದಕ್ಕೆ, ದಲಿತರ ಮನೆಯಲ್ಲಿ ಊಟ ಮಾಡಿದ್ದಕ್ಕೆ ಹೀಗೆ ಕೆಲ ಜನರು ಅಸ್ಪೃಶ್ಯತೆಯಿಂದ ದೂರ ಬರುವಾಗ ಆಡಳಿತವೇ ಅಸ್ಪೃಶ್ಯತೆಯತ್ತ ನೂಕುತ್ತಿದೆ.

ಅಂತರ್ಜಾತಿ ವಿವಾಹ ಮತ್ತು ಪ್ರೇಮ ವಿವಾಹಕ್ಕೆ ಕುಟುಂಬಸ್ಥರು ಒಪ್ಪದ ಕಾರಣ ಕಳೆದ ಆರು ತಿಂಗಳ ಅವಧಿಯಲ್ಲಿ ರತ್ಲಂ ಜಿಲ್ಲೆಯ ಪಂಚೇವಾ ಗ್ರಾಮದಲ್ಲಿ ಒಟ್ಟು ಸುಮಾರು 8 ಜೋಡಿಗಳು ಮನೆ ತೊರೆದು ಹೋಗಿ ಮದುವೆಯಾಗಿದ್ದಾರೆ. ಈ ವಿಚಾರದಲ್ಲಿ ಗ್ರಾಮದ ಹಿರಿಯರು ಮತ್ತು ನಿವಾಸಿಗಳು ಜನವರಿ 23ರಂದು ಗ್ರಾಮ ಪಂಚಾಯತ್ ಸಭೆ ಸೇರಿ ಈ ಜೋಡಿಗೆ ಮತ್ತು ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಘೋಷಿಸಿದೆ. ಕ್ಷೌರಿಕರು, ಪುರೋಹಿತರು ಈ ಕುಟುಂಬಗಳಿಗೆ ಸೇವೆ ನೀಡಬಾರದು, ಹಾಲು ಅಥವಾ ಯಾವುದೇ ದಿನಸಿ ವಸ್ತುಗಳನ್ನು ಕೊಡಬಾರದು, ಕೃಷಿ ಭೂಮಿಯನ್ನು ಗುತ್ತಿಗೆಗೆ ನೀಡಬಾರದು ಅಥವಾ ಪಡೆಯಬಾರದು, ದೇಶದಾದ್ಯಂತ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ, ನಿರ್ಧಾರವನ್ನು ಕಾನೂನುಬಾಹಿರ ಎಂದಿದ್ದಾರೆ.

2025ರಲ್ಲಿಯೂ ಮಧ್ಯಪ್ರದೇಶದಲ್ಲಿ ಇದೇ ರೀತಿಯ ಘಟನೆಗಳು ನಡೆದಿವೆ. ಬುಂದೇಲ್‌ಖಂಡ್ ಮತ್ತು ಮಾಲ್ವಾ ಪ್ರಾಂತ್ಯಗಳಲ್ಲಿ ಅಧಿಕವಾಗಿ ಬುಡಕಟ್ಟು ಮತ್ತು ದಲಿತ ಸಮುದಾಯದ ಯುವಕರು ಮೇಲ್ವರ್ಗದ ಯುವತಿಯರನ್ನು ವಿವಾಹವಾದಾಗ ಇಡೀ ಕುಟುಂಬಕ್ಕೆ ಬಹಿಷ್ಕಾರ ಹಾಕಿದ ಘಟನೆಗಳು ನಡೆದಿವೆ. ಯುವತಿ ಬೇರೆ ಜಾತಿಯ ಯುವಕನನ್ನು ಮದುವೆಯಾದ ಕಾರಣಕ್ಕೆ ಸಾಮಾಜಿಕ ಬಹಿಷ್ಕಾರ ಹೇರಿದ ಘಟನೆ ಮಧ್ಯಪ್ರದೇಶದ ಬಾಲಾಘಾಟ್ ಜಿಲ್ಲೆಯ ಗರ್‍ರಾ ಗ್ರಾಮದಲ್ಲಿ ನಡೆದಿತ್ತು. ಸಮುದಾಯಕ್ಕೆ ಮರಳಿ ಸೇರಬೇಕಾದರೆ 31,000 ರೂ. ನಗದು ಮತ್ತು ಒಂದು ಕುರಿಯನ್ನೂ ದಂಡವಾಗಿ ವಿಧಿಸಲಾಗಿತ್ತು. ವಿವಾಹದಲ್ಲಿ ಭಾಗಿಯಾದವರಿಗೆ ತಲಾ 11 ಸಾವಿರ ರೂಪಾಯಿ ದಂಡವನ್ನೂ ವಿಧಿಸಲಾಗಿತ್ತು. ಇದಾಗುತ್ತಿದ್ದಂತೆ ಕುಟುಂಬ ದಂಡ ತೆರಲು ನಿರಾಕರಿಸಿ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿತ್ತು. ಕೊನೆಗೆ ಸಾಮಾಜಿಕ ಕಾರ್ಯಕರ್ತೆ ಫಿರೋಜಾ ಖಾನ್ ಮಧ್ಯಸ್ಥಿಕೆಯಿಂದ ಒಪ್ಪಂದ ನಡೆದಿತ್ತು.

ಹಾಗೆಯೆ ಬೈತೂಲ್ ಜಿಲ್ಲೆ, ಭಯಾವಾಡಿ ಗ್ರಾಮದಲ್ಲಿ ನಾಲ್ಕಾರು ಜೋಡಿಗಳು ಅಂತರ್ಜಾತಿ ಪ್ರೇಮ ವಿವಾಹ ಮಾಡಿಕೊಂಡ ಕಾರಣ ಗ್ರಾಮದ ಹಿರಿಯರು ಜಾತಿ ಪಂಚಾಯತ್ ನಡೆಸಿ ಸಾಮಾಜಿಕ ಬಹಿಷ್ಕಾರ ಹೇರಿದ್ದರು. ಈ ಜೋಡಿಯ ಕುಟುಂಬಗಳನ್ನು ಗ್ರಾಮದ ಸಾಮಾಜಿಕ-ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಹೊರಗಿಡಲಾಗಿತ್ತು. 30,000 ರಿಂದ 2 ಲಕ್ಷ ರೂಪಾಯಿವರೆಗೆ ದಂಡವನ್ನೂ ವಿಧಿಸಲಾಗಿತ್ತು. ಕೊನೆಗೆ ಅಂತರ್ಜಾತಿ ಪ್ರೇಮ ವಿವಾಹವಾದ ಜೋಡಿಗಳು ಪೊಲೀಸರಿಗೆ ದೂರು ನೀಡಿದ್ದರು.

ಇನ್ನು ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶದಲ್ಲಿಯೂ ಇದೇ ರೀತಿಯ ಘಟನೆ ನಡೆದಿದೆ. ಇಲ್ಲಿ ಅಂತರ್ಜಾತಿ ಮಾತ್ರವಲ್ಲ ಅಂತರ್ಧರ್ಮೀಯ ವಿವಾಹಗಳು ಸಾಮಾಜಿಕ ಮತ್ತು ರಾಜಕೀಯ ಸಂಘರ್ಷಕ್ಕೆ ಕಾರಣವಾಗುತ್ತಿವೆ. 2025ರ ಜೂನ್‌ನಲ್ಲಿ ಝೂನ್ಸಿ ಜಿಲ್ಲೆಯ ಬಚೇಡಾ ಗ್ರಾಮದಲ್ಲಿ ಅಂತರ್ಜಾತಿ ವಿವಾಹವಾದ ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್ ಕುಟುಂಬಕ್ಕೆ ಗ್ರಾಮ ಪಂಚಾಯತ್ 20 ಲಕ್ಷ ರೂಪಾಯಿ ದಂಡ ವಿಧಿಸಿ ಸಾಮಾಜಿಕ ಬಹಿಷ್ಕಾರ ಹಾಕಿತ್ತು. ಹಾಗೆಯೇ ಬಹಿಷ್ಕಾರಕ್ಕೊಳಗಾದ ಕುಟುಂಬದೊಂದಿಗೆ ಮಾತನಾಡುವ ಯಾವುದೇ ಗ್ರಾಮಸ್ಥರಿಗೆ 50,000 ರೂಪಾಯಿ ದಂಡ ವಿಧಿಸುವುದಾಗಿ ಪಂಚಾಯತ್ ಆದೇಶಿಸಿತ್ತು. ಕುಟುಂಬ ದೂರು ನೀಡಿದ್ದರೂ ಪೊಲೀಸರು ಮಾತ್ರ ದೂರು ದಾಖಲಿಸಿರಲಿಲ್ಲ. ನಂತರ ಜಿಲ್ಲಾ ಪೊಲೀಸ್ ರಿಷ್ಠಾಧಿಕಾರಿಗಳ ಮಧ್ಯಪ್ರವೇಶದ ಬಳಿಕ ಎಫ್‌ಐಆರ್ ಖಲಿಸಿದ್ದರು.

ಗುಜರಾತ್‌ನಲ್ಲಿ ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಾಪ್ ಮಾದರಿಯ ಪಂಚಾಯತ್‌ಗಳು ಅಘೋಷಿತವಾಗಿ ರ್ಯನಿರ್ವಹಿಸುತ್ತವೆ. ಈ ಪಂಚಾಯತ್‌ಗಳು ಂತರ್ಜಾತಿ ವಿವಾಹವಾದ ಕುಟುಂಬಗಳಿಗೆ ₹50,000 ಂದ ₹5 ಲಕ್ಷದವರೆಗೆ ದಂಡ ವಿಧಿಸುವ ಅಥವಾ ಟುಂಬವನ್ನು ಬಹಿಷ್ಕರಿಸುವ ಕಾರ್ಯವನ್ನು ಮಾಡುತ್ತಿದೆ. ರಿಯಾಣದಲ್ಲಿಯೂ ಖಾಪ್ ಪಂಚಾಯತ್ ಸಾಮಾಜಿಕ ಹಿಷ್ಕಾರ ಹಾಕುತ್ತಿದೆ.

ಆದರೆ ಇದು ಬರೀ ಸಾಮಾಜಿಕ ಬಹಿಷ್ಕಾರಕ್ಕೆ ಮಿತವಾಗಿಲ್ಲ. ಮರ್ಯಾದೆ ಹತ್ಯೆಯೂ ನಡೆಯುತ್ತಿದೆ. ಅಂತರ್ಜಾತಿ ಅಥವಾ ಅಂತರ್ಧರ್ಮೀಯ ವಿವಾಹವಾದ ಕಾರಣಕ್ಕೆ ಆ ಜೋಡಿಯನ್ನು ಕೊಲ್ಲುವ ಘಟನೆಗಳು ಹೆಚ್ಚು ವರದಿಯಾಗುತ್ತಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ಮತ್ತು ಇತ್ತೀಚಿನ ವರದಿಗಳ ಪ್ರಕಾರ (2025-26) ಉತ್ತರ ಭಾರತದ ರಾಜ್ಯಗಳಲ್ಲಿ ಹೆಚ್ಚಾಗಿ ಈ ಮರ್ಯಾದೆ ಹತ್ಯೆಗಳು ನಡೆಯುತ್ತಿದೆ. ಈ ಪೈಕಿ ಬಹುತೇಕ ರಾಜ್ಯಗಳು ಅಭಿವೃದ್ಧಿ ಕೂಗು ಹಾಕುವ ಬಿಜೆಪಿ ಆಡಳಿತವಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ದಕ್ಷಿಣ ಭಾರತದಲ್ಲೂ ಇಂತಹ ಘಟನೆಗಳು ವರದಿಯಾಗುತ್ತಿದೆ. ಅಧಿಕೃತವಾಗಿ ದಾಖಲೆಗಳಲ್ಲಿ ವರ್ಷಕ್ಕೆ ಸರಾಸರಿ 25 ರಿಂದ 50 ಪ್ರಕರಣಗಳು ಮಾತ್ರ ಮರ್ಯಾದೆ ಹತ್ಯೆ ಎಂದು ದಾಖಲಾಗುತ್ತವೆ. ಆದರೆ ಮಾನವ ಹಕ್ಕುಗಳ ಸಂಘಟನೆಗಳ ಪ್ರಕಾರ, ದೇಶದಲ್ಲಿ ಪ್ರತಿ ವರ್ಷ 1,000ಕ್ಕೂ ಹೆಚ್ಚು ಮರ್ಯಾದೆ ಹತ್ಯೆ ನಡೆಯುತ್ತವೆ. ಆದರೆ ಅದನ್ನು ಆತ್ಮಹತ್ಯೆ ಅಥವಾ ಅಪಘಾತ ಎಂದು ಹೇಳಿ ಮುಚ್ಚಿಹಾಕಲಾಗುತ್ತಿದೆ.

ಅದರಲ್ಲೂ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೇ ಇಂತಹ ಪ್ರಕರಣಗಳು ಅಧಿಕವಾಗಿದೆ ಎಂದು ವರದಿಗಳು ಹೇಳುತ್ತವೆ. ಹಾಗಿದ್ದಾಗ ದೇಶವನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಸಾಮಾಜಿಕವಾಗಿ ಅಭಿವೃದ್ಧಿ ಮಾಡುವುದು ಯಾವಾಗ ಎಂಬ ಪ್ರಶ್ನೆ ನೆಟ್ಟಿಗರದ್ದು. ಕರ್ನಾಟಕದಲ್ಲಿ ಸಾಮಾಹಿಕ ಬಹಿಷ್ಕಾರ ಪ್ರಕರಣಗಳು ಕಂಡುಬರುತ್ತಿದ್ದಂತೆ ಸರ್ಕಾರ ಸಾಮಾಜಿಕ ಬಹಿಷ್ಕಾರ ತಡೆ ಕಾಯ್ದೆ ಜಾರಿ ಮಾಡಿದೆ. ಖ್ಯಾತ ವಿಚಾರವಾದಿ ಡಾ. ನರೇಂದ್ರ ದಾಬೋಲ್ಕರ್ ಅವರ ಹೋರಾಟದ ಫಲವಾಗಿ ಅವರ ಹತ್ಯೆಯ ನಂತರ ಮಹಾರಾಷ್ಟ್ರದಲ್ಲಿ 2016ರಲ್ಲಿ ಬಿಜೆಪಿ-ಶಿವಸೇನೆ ಮೈತ್ರಿ ಸರ್ಕಾರವೇ ಸಾಮಾಜಿಕ ಬಹಿಷ್ಕಾರ ತಡೆ ಕಾಯ್ದೆಯನ್ನು ಜಾರಿಗೆ ತಂದಿದೆ. ಹಾಗಿರುವಾಗ ಇತರೆ ರಾಜ್ಯಗಳಲ್ಲಿ ಅದರಲ್ಲೂ ಮುಖ್ಯವಾಗಿ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಇಂತಹ ಕಾಯ್ದೆ ಜಾರಿಗೆ ತರಲು ಸರ್ಕಾರ ಹಿಂಜರಿಯುವುದೇಕೆ? ಬಿಜೆಪಿ ಆಡಳಿತದ ರಾಜ್ಯ ಯಾವ ಕಾಲಮಾನದಲ್ಲಿದೆ?

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR